# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

## ಬೆಂಗಳೂರು

**ಹೆಚ್.ಆರ್.ಸಿ.ಸಂಖ್ಯೆ:4055/10/31/2018 C/w**

**3612/10/31/2018 (SB –3)**

**ದಿನಾಂಕ: 15–04–2021.**

**ಉಪಸ್ಥಿತರು: ಶ್ರೀ ಆರ್.ಕೆ.ದತ್ತ, ಮಾನ್ಯ ಸದಸ್ಯರು**

**ದೂರುದಾರರು:**

ಶ್ರೀಮತಿ ಸೈಯದಾ ಜಬೀನ್ ತಾಜ್ ಕೋಂ ಮೊಹಮದ್ ಹಫೀಜ್,
ಹಳೇ ನಂ. 132/133, ಹೊಸ ನಂ. 44, ಕ್ಲಾಸೀಕ್ ಸ್ಕೂಲ್ ಹತ್ತಿರ,
ಉದಯಗಿರಿ, ಮೈಸೂರು – 570 019.

**ಆದೇಶ**

ದೂರುದಾರರಾದ ಶ್ರೀಮತಿ ಸೈಯದಾ ಜಬೀನ್ ತಾಜ್ ರವರ ದೂರಿನಲ್ಲಿ ದಿನಾಂಕ: 28–07–2018 ರಂದು ಬೆಳಗ್ಗೆ 11 ಗಂಟೆಗೆ ಮೈಸೂರು ಗ್ರಾಮಾಂತರ ವೃತ್ತ ನಿರೀಕ್ಷಕರಾದ ಶ್ರೀ ಕರೀಂ ರಾವ್‌ತರ್ ಹಾಗೂ ಸಿಬ್ಬಂದಿಗಳು ದೂರುದಾರರ ಪತಿಯಾದ ಶ್ರೀ ಮೊಹಮದ್ ಹಫೀಜ್ ರವರನ್ನು ಎರಡು ದಿನಗಳ ಕಾಲ ವಿಚಾರಣೆಗೆಂದು ಕರೆದೋಯ್ದು, ಅದೇ ದಿನ (28.07.2018) ಮೊಹಮದ್ ಹಫೀಜ್ ರವರಿಗೆ ತರ್ಡ್ ಡಿಗ್ರಿ ಕಿರುಕುಳ ಹಾಗೂ ದೈಹಿಕ ಹಿಂಸೆ ನೀಡಿದ್ದು, ಹಾಗೂ 400 ಗ್ರಾಂ ಚಿನ್ನ ನೀಡುವಂತೆ ಒತ್ತಾಯ ಮಾಡಿ ಅವರ ಗಂಡನ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ ಎಂದು ಆಪಾದನೆ ಮಾಡಿರುತ್ತಾರೆ. ಮುಂದುವರೆದು ದಿನಾಂಕ. 04 ಮತ್ತು 05ನೇ ಆಗಸ್ಟ್ 2018ರಂದು ಮೇಲೆ ಹೇಳಲಾದ ಪೊಲೀಸರು ದೂರುದಾರರ ಮನೆಗೆ ಏಕಾಏಕಿ ಬಂದು ಮನೆಯನ್ನು ಪರಿಶೀಲಿಸಿ, ಮನೆಯಲ್ಲಿದ್ದ ಹೆಂಗಸಿಗರಿಗೆ ಹಾಗೂ ಹಿರಿಯರಿಗೆ ಅಶ್ಲೀಲ ಭಾಷೆ ಹಾಗೂ ಕೆಟ್ಟ ಪದಗಳಿಂದ ಮಾತನಾಡಿ, ದೂರುದಾರರ ತಂದೆ ಹಾಗೂ ಬಾಮೈದ ರವರನ್ನು ಮನೆಯಿಂದ ಕರೆದುಕೊಂಡು ಹೋಗಿ ಅವರ ವಶದಲ್ಲಿ ಇರಿಸಿಕೊಂಡು, ಅವರಿಗೆ ಹಿಂಸೆಯನ್ನು ನೀಡಿ, ಮೊಹಮದ್ ಹಫೀಜ್ ಎಲ್ಲಿದ್ದಾನೆ ಎಂದು ಹೇಳದೇ ಇದ್ದಲ್ಲಿ ಅವರುಗಳ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸುವುದಾಗಿ ಹೇಳಿರುತ್ತಾರೆ ಎಂದು ಆರೋಪ ಮಾಡಿರುತ್ತಾರೆ.

ಈ ದೂರಿನ ಪ್ರತಿಯನ್ನು ಪೊಲೀಸ್ ಆಯುಕ್ತರು, ಮೈಸೂರು ನಗರ ಇವರಿಗೆ ಕಳುಹಿಸಿದ್ದು, ದಿನಾಂಕ 9.11.2018ರ ಪತ್ರದ ಅನ್ವಯ ಪೊಲೀಸ್ ಅಧೀಕ್ಷಕರು ಮೈಸೂರು ಜಿಲ್ಲೆ ರವರು ಈ ದೂರಿನ ಸಂಬಂಧ ವರದಿ ಸಲ್ಲಿಸಿದ್ದಾರೆ. ದೂರರ್ಜಿಯ ಬಗ್ಗೆ ಸಹಾಯಕ ಪೊಲೀಸ್ ಅಧೀಕ್ಷಕರು, ಮೈಸೂರು ಗ್ರಾಮಾಂತರ ಉಪ-ವಿಭಾಗ, ಮೈಸೂರು ಜಿಲ್ಲೆ ರವರು ಖುದ್ದು ಅರ್ಜಿದಾರರನ್ನು ವಿಚಾರಣೆ ಮಾಡಲಾಗಿ ದಿ: 28.07.2018 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಅವರ ಗಂಡನಾದ ಮೊಹಮದ್ ಹಫೀಜ್ ರವರ ಅಂಗಡಿಯ ಬಳಿ ಇಬ್ಬರೂ ಪೊಲೀಸ್ ಸಿಬ್ಬಂದಿಗಳು ಬಂದು ಅವರ ಗಂಡ ಈ ಹಿಂದೆ ಕಳ್ಳರಿಂದ ಖರೀದಿಸಿರುವ ಚಿನ್ನದ ಆಭರಣಗಳನ್ನು ಕೊಡುವಂತೆ ಒತ್ತಾಯಿಸಿದ್ದು, ಅವರ ಗಂಡ ಪೊಲೀಸ್ ಸಿಬ್ಬಂದಿಗಳಿಗೆ ಚಿನ್ನದ ಆಭರಣ ಮಾರಾಟ ಮಾಡುವ ವ್ಯಾಪಾರ ಮಾಡಿಕೊಂಡಿದ್ದು, ಖರೀದಿಸುವ ಅಥವಾ ಗಿರಿವಿ ಇಟ್ಟುಕೊಳ್ಳುವ ವ್ಯವಹಾರ ನಡೆಸುತ್ತಿರುವುದಿಲ್ಲವೆಂದು ಹೇಳಿದಾಗ, ದೂರುದಾರರ ಗಂಡನನ್ನು ಇನ್ಸ್‌ಪೆಕ್ಟರ್ ಇರುವ ಜೀಪಿನ ಬಳಿ ಕರೆದುಕೊಂಡು ಹೋಗಿ, ಬಲವಂತವಾಗಿ ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಅವರ ಗಂಡನಿಗೆ ಹಿಂಸೆ ನೀಡಿ, ಮದ್ಯಪಾನ ಮಾಡಿದ ಮತ್ತಿನಲ್ಲಿ ಅವಾಚ್ಯ ಶಬ್ದಗಳಿಂದ ಅವರ ಗಂಡನನ್ನು ಉದ್ದೇಶಿಸಿ ಬೈದು, 250 ಗ್ರಾಂ ಚಿನ್ನ ಮತ್ತು 05 ಲಕ್ಷ ರೂಗಳನ್ನು ನೀಡುವಂತೆ ಹಿಂಸಿಸಿ, ಕೊಡಲು ಒಪ್ಪದೇ ಇದ್ದಲ್ಲಿ, ಪತ್ತೆಯಾಗದ ಎಲ್ಲಾ ಕೇಸಿನಲ್ಲಿ ಫಿಟ್ ಮಾಡುವುದಾಗಿ ಹೆದರಿಸಿದ ಬಗ್ಗೆ, ಅವರ ಗಂಡನಿಂದ ಕಳುವು ಮಾಲು ಸ್ವೀಕರಿಸುವುದಾಗಿ ಒಪ್ಪಿಕೊಂಡಿರುವಂತೆ ಪೊಲೀಸ್ ಸಿಬ್ಬಂದಿಗಳು ವಿಡಿಯೋ ರೆಕಾರ್ಡಿಂಗ್ ಮಾಡಿರುವುದಾಗಿ, ಸರ್ಕಲ್ ಇನ್ಸ್‌ಪೆಕ್ಟರ್ ಕರೀಂ ರಾವ್‌ತರ್ ಮತ್ತು ಸಿಬ್ಬಂದಿಗಳ ವಿರುದ್ದ ಆರೋಪ ಮಾಡಿರುತ್ತಾರೆ.

ಸದರಿ ಅರ್ಜಿಯ ಸಂಬಂಧ ಎದುರುದಾರರಾದ ಮೈಸೂರು ಗ್ರಾಮಾಂತರ ವೃತ್ತದ ಸಿಪಿಐ ರವರಾದ ಶ್ರೀ ಕರೀಂ ರಾವ್‌ತರ್ ಮತ್ತು ಸಿಬ್ಬಂದಿಗಳನ್ನು ವಿಚಾರಣೆ ಮಾಡಲಾಗಿ ಸದರಿಯವರು ತಮ್ಮ ಹೇಳಿಕೆಗಳಲ್ಲಿ ಅರ್ಜಿದಾರರು ಆರೋಪಿಸಿರುವಂತೆ ತಾವು ಅರ್ಜಿದಾರರಿಂದ ಹಣಕ್ಕೆ ಯಾವುದೇ ರೀತಿಯಲ್ಲಿ ಒತ್ತಾಯ ಮಾಡಿರುವುದಿಲ್ಲವೆಂಬುದಾಗಿ, ಅವರಿಗೆ ಯಾವುದೇ ರೀತಿಯಲ್ಲಿ ಹಿಂಸೆ ನೀಡಿರುವುದಿಲ್ಲವೆಂಬುದಾಗಿ, ಮೈಸೂರು ಗ್ರಾಮಾಂತರ ವೃತ್ತದ ಇಲವಾಲ ಪೊಲೀಸ್ ಠಾಣಾ ಮೊ.ಸಂ: 153/2018 ಕಲಂ. 392 ಐಪಿಸಿ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಪತ್ತೆಗೆ ಕ್ರಮ ಕೈಗೊಂಡಿದ್ದು, ಸದರಿ ಪ್ರಕರಣದಲ್ಲಿ ಆರೋಪಿತ ಸೈಯದ್ ಅಯುಬ್ ಎಂಬಾತನನ್ನು ವಶಕ್ಕೆ ತೆಗೆದುಕೊಂಡು ಕೂಲಂಕುಶವಾಗಿ ವಿಚಾರಣೆ ಮಾಡಿ ನೀಡಿದ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿ ಕೊಂಡಿದ್ದು, ಸದರಿ ಆರೋಪಿತನು ಈ ಪ್ರಕರಣದೊಂದಿಗೆ ಕೆ.ಆರ್.ನಗರ, ಸಾಲಿಗ್ರಮ, ಬನ್ನೂರು, ಹುಲ್ಲಹಳ್ಳಿ, ಅರಸಿಕೆರೆ, ಗಂಡಸಿ, ಮಳವಳ್ಳಿ, ಕೆ.ಎಂ.ದೊಡ್ಡಿ ಠಾಣೆಯ ಸರಹದ್ದಿನಲ್ಲಿ ಚಿನ್ನದ ಚೈನನ್ನು ಕಿತ್ತುಕೊಂಡಿರುವ

ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ನೀಡಿ ಆ ಪ್ರಕರಣಗಳಲ್ಲಿ ತಾನು ಮಹಮದ್ ಜಾವೀದ ಈತನೊಂದಿಗೆ ಸೇರಿ ಚಿನ್ನದ ಸರಗಳನ್ನು ಅಪಹರಿಸಿದ್ದು, ಸೈಯದ್ ಅಯುಬ್ 09 ಚಿನ್ನದ ಸರಗಳನ್ನು ಅರ್ಜಿದಾರರ ಗಂಡನಿಗೆ ಮಾರಟ ಮಾಡಿದ್ದು, ಅರ್ಜಿದಾರರ ಗಂಡ ಕದ್ದ ಸರಗಳನ್ನು ನಿರಂತರವಾಗಿ ಖರೀದಿ ಮಾಡುತ್ತಿದ್ದು ಹಾಗೂ ಅವರಿಗೆ ಕಳ್ಳತನ ಮಾಡಿ ಮಾರಾಟ ಮಾಡುತ್ತಿರುವ ಸರಗಳು ಎಂದು ತಿಳುವಳಿಕಗೆ ಇರುವುದು ತನಿಖೆಯಲ್ಲಿ ಕಂಡು ಬಂದಿದ್ದು, ಸದರಿ ಮೊಹಮದ್ ಹಫೀಜ್‌ನನ್ನು ಕಳವು ಮಾಲು ಖರೀದಿ ಮಾಡುವ ಆರೋಪದಲ್ಲಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಾಗಿ ಹೇಳಿಕೆ ನೀಡಿದ್ದು, ಹಾಗೂ ಅರ್ಜಿದಾರರು ಸರ್ಕಲ್ ಇನ್ಸ್‌ಪೆಕ್ಟರ್ ಕರೀಂ ರಾವ್‌ತರ್ ರವರ ವಿರುದ್ಧ ಆರೋಪ ಮಾಡಿರುವುದಾಗಿ ಸುಳ್ಳು ಮತ್ತು ಸತ್ಯಕ್ಕೆ ದೂರವಾಗಿದೆ.

ಅರ್ಜಿದಾರರ ಗಂಡನಾದ ಶ್ರೀ ಮೊಹಮದ್ ಹಫೀಜ್ ರವರ ವಿವರವಾದ ಹೇಳಿಕೆಯಲ್ಲಿ ಅವರ ವಕೀಲರು ಮುಂದೆ ಆಗಬಹುದಾದ ಘಟನೆಗಳ ಬಗ್ಗೆ ತಪ್ಪಿಸುವ ಸಲುವಾಗಿ, ತನಗೆ ಯಾವುದೇ ಕಾರಣಕ್ಕೂ ಪೊಲೀಸರ ಬಳಿ ತಪ್ಪನ್ನು ಒಪ್ಪಿಕೊಳ್ಳದಂತೆ, ನಾನು ಖರೀದಿಸಿದ್ದ ಚಿನ್ನದ ಆಭರಣಗಳನ್ನು ಪೊಲೀಸರಿಗೆ ಹಾಜರ್‌ಪಡಿಸದಂತೆ ತಿಳಿಸಿ, ಅರ್ಜಿಗೆ ಸಹಿ ಪಡೆದು ಈ ಅರ್ಜಿಯನ್ನು ಮೈಸೂರು ಜಿಲ್ಲೆಯ ಎಸ್‌ಪಿ ರವರಿಗೆ ಕಳುಹಿಸುವುದಾಗಿ ತಿಳಿಸಿದ್ದರು. ಆದರೆ ಅರ್ಜಿಯಲ್ಲಿ ವಕೀಲರು ಆರೋಪ ಮಾಡಿರುವಂತೆ ತನಗೆ ಯಾವ ಪೊಲೀಸ್ ಅಧಿಕಾರಿ / ಸಿಬ್ಬಂದಿರವರು ಸಹ ತನ್ನನ್ನು ಹಿಂಸಿಸಿ ಹಣಕ್ಕಾಗಿ ಮತ್ತು ಚಿನ್ನವನ್ನು ಕೊಡುವಂತೆ ಒತ್ತಾಯಿಸಿರುವುದಿಲ್ಲ. ತಾನು ಸೈಯುದ್ ಅಯುಬ್, ಸದ್ದಾಂ ಮತ್ತು ಜವಾದ್ ರವರುಗಳಿಂದ ಕಳ್ಳತನ ಮಾಡಿದ್ದ ಚಿನ್ನದ ಚೈನುಗಳನ್ನು ಖರೀದಿಸಿದ್ದ ಕೇಸುಗಳಿಗೆ ಸಂಬಂಧಿಸಿದಂತೆ ತನ್ನನ್ನು ಬಚಾವ್ ಮಾಡುವ ಸಲುವಾಗಿ, ಈ ರೀತಿ ಪೊಲೀಸರ ವಿರುದ್ದ ಇಲ್ಲಸಲ್ಲದ ಆರೋಪ ಮಾಡಿ ಅರ್ಜಿಯನ್ನು ನೀಡಿರುತ್ತಾರೆಂದು ಹೇಳಿರುತ್ತಾರೆ. ಆದುದರಿಂದ ಸದರಿ ಅರ್ಜಿಯಲ್ಲಿ ಅರ್ಜಿದಾರರು ಎದುರು ಅರ್ಜಿದಾರರುಗಳ ವಿರುದ್ದ ನೀಡಿರುವ ಅರ್ಜಿಯು ಸತ್ಯಕ್ಕೆ ದೂರವಾದ ಸಂಗತಿ ಎಂಬುದು ತಿಳಿದುಬಂದ ಮೇರೆಗೆ ಸದರಿ ಅರ್ಜಿಯನ್ನು ವಿಲೇಗೊಳಿಸಲಾಗಿರುತ್ತದೆ ಎಂದು ವರದಿಯನ್ನು ಸಲ್ಲಿಸಿರುತ್ತಾರೆ.

ತದನಂತರ, ದಿನಾಂಕ: 5.10.2018ರಂದು ದೂರುದಾರರಾದ ಶ್ರೀಮತಿ ಸೈಯದಾ ಜಬೀನ್ ತಾಜ್ ರವರು ವೃತ್ತ ನಿರೀಕ್ಷಕರಾದ ಶ್ರೀ ಕರೀಂ ರಾವ್‌ತರ್ ಹಾಗೂ ಸಿಬ್ಬಂದಿಗಳ ಮೇಲೆ ಆಯೋಗಕ್ಕೆ ಮತ್ತೊಂದು ದೂರನ್ನು ಸಲ್ಲಿಸಿರುತ್ತಾರೆ. ಆ ದೂರಿನಲ್ಲಿ, ದಿನಾಂಕ: 4.10.2018 ರಂದು ವೃತ್ತ ನಿರೀಕ್ಷಕರಾದ ಕರೀಂ ರಾವ್‌ತರ್ ರವರು ದೂರುದಾರರ ಪತಿಯಾದ ಶ್ರೀ ಮೊಹಮದ್ ಹಫೀಜ್ ರವರನ್ನು ಮತ್ತೆ ನಂಜನಗೂಡು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ನಂತರ ನಂಜನಗೂಡು

ಸಬ್–ಜೈಲಿಗೆ ಹಾಜರುಪಡಿಸಿದ್ದು, ಈ ಸಲುವಾಗಿ ಕಾರ್ಪೋರೇಟರ್ ಹಾಗೂ ದೂರುದಾರರು ಪೊಲೀಸ್ ಅಧೀಕ್ಷಕರನ್ನು ಭೇಟಿ ಮಾಡಲು ಹೋಗಿದ್ದು, ಪೊಲೀಸ್ ಅಧೀಕ್ಷಕರು ದೂರುದಾರರ ಗಂಡ ಶ್ರೀ ಮೊಹಮದ್ ಹಫೀಜ್ ರವರು ಮೇಲಾಧಿಕಾರಿಗಳಿಗೆ ಅರ್ಜಿಗಳನ್ನು ಸಲ್ಲಿಸಿರುವ ಕಾರಣದಿಂದ ದೂರುದಾರರ ಮತ್ತು ಕಾರ್ಪೋರೇಟರ್ ರವರ ಮೇಲೆ ಕೂಗಾಡಿ ಹೊರಗಡೆ ಕಳುಹಿಸಿದ್ದು ಹಾಗೂ 2, 3 ತಿಂಗಳಿಂದ ಅವರ ಅಂಗಡಿ ಮುಚ್ಚಿದ್ದು, ಅವರ ಗಂಡನನ್ನು ಬಹಳ ಹಿಂಸಿಸುತ್ತಿದ್ದಾರೆಂದು ಆರೋಪ ಮಾಡಿರುತ್ತಾರೆ.

ಈ ದೂರಿನ ಪ್ರತಿಯನ್ನು ಆಯೋಗದ ಡಿವೈಎಸ್‌ಪಿ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕಳುಹಿಸಿದ್ದು, ಅದರಂತೆ ಆಯೋಗದ ಎಡಿಜಿಪಿ ರವರು ದಿನಾಂಕ: 2.8.2019ರ ಪತ್ರದೊಂದಿಗೆ ಡಿವೈಎಸ್‌ಪಿ ರವರ ವರದಿಯನ್ನು ಹಾಗೂ ಅದರೊಂದಿಗಿನ ಅಡಕಗಳನ್ನು ಸಲ್ಲಿಸಿರುತ್ತಾರೆ. ಡಿವೈಎಸ್‌ಪಿ ರವರ ವರದಿಯನ್ನು ಪರಿಶೀಲಿಸಲಾಗಿ, ದಿನಾಂಕ:13.08.2018 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಮೈಸೂರು ಸೌತ್ ವೃತ್ತದ ಸಿ.ಪಿ.ಐ ಶ್ರೀ ಕರೀಮ್ ರಾವ್‌ತರ್ ರವರ ಅಧೀನದಲ್ಲಿ ಕರ್ತವ್ಯ ನಿರ್ವಹಿಸಿಕೊಂಡಿರುವ ಸಿಬ್ಬಂದಿಗಳೊಂದಿಗೆ ಸೇರಿ ದೂರುದಾರರ ಗಂಡ ಶ್ರೀ ಮೊಹಮದ್ ಹಫೀಜ್ ರವರನ್ನು ಈತನ ಮನೆಯ ಬಳಿಯಿಂದ ಕರೆತಂದು ಸಿ.ಪಿ.ಐ ರವರ ಮುಂದೆ ಹಾಜರುಪಡಿಸಿದ್ದು, ಸಿ.ಪಿ.ಐರವರು ಸದರಿ ಮೊಹಮದ್ ಹಫೀಜ್ ನನ್ನು ಅವರು ತನಿಖೆ ಕೈಗೊಂಡಿದ್ದು, ಇಲವಾಲ ಪೊಲೀಸ್ ಠಾಣಾ ಮೊ.ಸಂ.153/2018 ಕಲಂ 392 ಐಪಿಸಿ (ಸರ ಅಪಹರಣ) ಕೇಸಿನಲ್ಲಿ ದಸ್ತಗಿರಿ ಮಾಡಿಕೊಂಡಿರುತ್ತಾರೆ. ತಮ್ಮ ತನಿಖಾ ಕಾಲದಲ್ಲಿ ಶ್ರೀ ಮೊಹಮದ್ ಹಫೀಜ್‌ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು ಸೈಯದ್ ಅಯೂಬ್ ಎಂಬಾತನಿಂದ ಪಡೆದುಕೊಂಡಿರುವ 09 ಚಿನ್ನದ ಸರಗಳನ್ನು ತನ್ನ ಅಂಗಡಿಯಲ್ಲಿ ಇಟ್ಟಿದ್ದು, ಬೀಗವು ತನ್ನ ಮಾವ ಸೈಯದ್ ಏಜಾಜ್‌ರವರ ಬಳಿ ಇದ್ದು, ಅವರು ಬೆಂಗಳೂರಿಗೆ ಹೋಗಿರುತ್ತಾರೆ. ಅವರು ಬಂದ ಕೂಡಲೇ ಅವುಗಳನ್ನು ನೀಡುವುದಾಗಿ ತಿಳಿಸಿದ್ದರಿಂದ ತನಿಖಾಧಿಕಾರಿಯವರು ಈತನನ್ನು ಅದೇ ದಿನ ದಿನಾಂಕ: 13.08.2018 ರಂದು ರಾತ್ರಿ ನ್ಯಾಯಾಧೀಶರ ಗೃಹ ಕಛೇರಿಗೆ ರಿಮಾಂಡ್ ಅರ್ಜಿಯೊಂದಿಗೆ ಹಾಜರುಪಡಿಸಿದ್ದು, ಶ್ರೀ ಮೊಹಮದ್ ಹಫೀಜ್‌ನನ್ನು ನ್ಯಾಯಾಧೀಶರು ವಿಚಾರಣೆ ಮಾಡಿದ್ದು, ಈತನು ಪೊಲೀಸರ ವಿರುದ್ಧ ಯಾವುದೇ ಆಪಾದನೆಯನ್ನು ಮಾಡದೆ ಇರುವುದು ಮತ್ತು ಪೊಲೀಸರು ಮಾನ್ಯ ಸರ್ವೋಚ್ಛ ನ್ಯಾಯಾಲಯದ 11 ಮಾರ್ಗಸೂಚಿಯನ್ನು ಪಾಲಿಸಿರುವ ಬಗ್ಗೆ ನ್ಯಾಯಾಧೀಶರ ಆದೇಶದ ಪ್ರತಿಯಿಂದ ಕಂಡು ಬಂದಿರುತ್ತದೆ.

ನಂತರ ತನಿಖಾಧಿಕಾರಿಯವರು ಆರೋಪಿ ಮೊಹಮದ್ ಹಫೀಜ್‌ನನ್ನು ತನಿಖೆಯ ಸಲುವಾಗಿ ಪೊಲೀಸ್ ಅಭಿರಕ್ಷೆಗೆ ನೀಡುವ ಸಲುವಾಗಿ ದಿನಾಂಕ: 16.08.2018 ರಂದು ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿಕೊಂಡಿದ್ದು, ಈ ಬಗ್ಗೆ ನ್ಯಾಯಾಲಯವು ಈತನನ್ನು ದಿನಾಂಕ: 20.08.2018 ರಿಂದ 21.08.2018 ರವರೆಗೆ 2 ದಿನಗಳ ಪೊಲೀಸ್ ಕಸ್ಟಡಿಗೆ ನೀಡಿದ್ದು, ಈ ಅವಧಿಯಲ್ಲಿ ತನಿಖಾಧಿಕಾರಿಯವರು ದಿನಾಂಕ:21.08.2018 ರಂದು ಈತನು ತನ್ನ ಷರೀಫ್ ಜ್ಯುವೆಲರಿ ಅಂಗಡಿಯಿಂದ ಹಾಜರುಪಡಿಸಿದ ವಿವಿಧ ತೂಕವುಳ್ಳ 9 ಚಿನ್ನದ ಸರಗಳನ್ನು ಅಮಾನತ್ತುಪಡಿಸಿಕೊಂಡಿದ್ದು, ಇವುಗಳು ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ 9 ಸರ ಅಪಹರಣ (ಕಲಂ 392 ಐಪಿಸಿ) ಕೇಸಿಗೆ ಸಂಬಂಧಿಸಿದ ಕೇಸುಗಳಿಗೆ ಸಂಬಂಧಪಟ್ಟಿರುವುದು ತನಿಖಾಧಿಕಾರಿಯಾದ ಸಿಪಿಐ ಶ್ರೀ ಕರೀಮ್ ರಾವ್‌ತರ್ ರವರ ಹೇಳಿಕೆ ಮತ್ತು ಸಂಬಂಧಪಟ್ಟ ಠಾಣೆಗಳ ಪ್ರಥಮ ವರ್ತಮಾನ ವರದಿಯಿಂದ ಕಂಡು ಬಂದಿರುತ್ತದೆ.

ಶ್ರೀ ಮೊಹಮದ್ ಹಫೀಜ್ ರವರಿಗೆ ಪೊಲೀಸರು ದಿನಾಂಕ: 28.07.2018ರಂದು ಸಂಜೆ ಪೊಲೀಸರು ದೈಹಿಕ ಹಲ್ಲೆಯನ್ನು ಮಾಡಿರುತ್ತಾರೆ ಎಂಬ ಆಪಾದನೆಯ ಬಗ್ಗೆ ದೂರುದಾರರು ಮತ್ತು ಇವರ ಪತಿ ಶ್ರೀ ಮೊಹಮದ್ ಹಫೀಜ್ ರವರ ಹೇಳಿಕೆ ಮತ್ತು ಇವರು ಹಾಜರುಪಡಿಸಿದ ಫೋಟೋ ಮತ್ತು ಗಾಯದ ಪ್ರಮಾಣ ಪತ್ರವನ್ನು ಹೊರತುಪಡಿಸಿ ಬೇರೆ ಯಾವುದೇ ಸ್ವತಂತ್ರ ಸಾಕ್ಷಿಗಳು ಕಂಡು ಬಂದಿರುವುದಿಲ್ಲ.

ಶ್ರೀ ಮೊಹಮದ್ ಹಫೀಜ್ ರವರು ಘಟನೆಯ ದಿನಾಂಕ:31.07.2018 ರಂದು ಸಂಜೆ 4.39 ಗಂಟೆಯಲ್ಲಿ ಮೈಸೂರಿನ ಕೆ.ಆರ್ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದು, ಈ ಬಗ್ಗೆ ಆಸ್ಪತ್ರೆಯವರು ಕಳುಹಿಸಿದ ಪೊಲೀಸ್ ಇಂಟಿಮೇಶನ್ (ಎಂ.ಎಲ್.ಸಿ)ಅನ್ನು ಮೈಸೂರು ಸೌತ್ ಪೊಲೀಸ್ ಠಾಣೆಯಲ್ಲಿ ದಿನಾಂಕ:31.07.2018 ರಂದು ಠಾಣಾ ಎಸ್.ಹೆಚ್.ಓ ಕರ್ತವ್ಯದಲ್ಲಿದ್ದ ಶ್ರೀ ಟಿ.ಗೋವಿಂದ, ಹೆಚ್.ಸಿ 70 ರವರು ಸ್ವೀಕರಿಸಿಕೊಂಡಿದ್ದು, ದಿನಾಂಕ:01.08.2018 ರಂದು ಬೆಳಿಗ್ಗೆ ಆಸ್ಪತ್ರೆಗೆ ತೆರಳಿದ್ದು, ಅಲ್ಲಿ ಗಾಯಾಳು ಹೊರರೋಗಿಯಾಗಿ ಚಿಕಿತ್ಸೆ ಪಡೆದಿರುವ ಬಗ್ಗೆ ಮಾಹಿತಿ ತಿಳಿದು ಗಾಯಾಳುವನ್ನು ಫೋನ್ ಮುಖೇನ ಠಾಣೆಗೆ ಬರುವಂತೆ ತಿಳಿಸಿದ್ದರೂ ಸಹ ಅವರು ಬಂದಿರುವುದಿಲ್ಲ ಎಂದು ತಮ್ಮ ಹೇಳಿಕೆಯಲ್ಲಿ ನುಡಿದಿದ್ದು, ಶ್ರೀ ಮೊಹಮದ್ ಹಫೀಜ್‌ನನ್ನು ದಿನಾಂಕ: 13.08.2018 ರಂದು ಸಂಜೆ ಇಲವಾಲ ಠಾಣಾ ಮೊ.ಸಂ.153/2018 ಕಲಂ 392 ಐಪಿಸಿ ಕೇಸಿನಲ್ಲಿ ದಸ್ತಗಿರಿ ಮಾಡಿದ್ದರೂ ಸಹ ಎಂ.ಎಲ್.ಸಿ ಮೆಮೊ ಬಗ್ಗೆ ಈತನನ್ನು ವಿಚಾರಣೆ ಮಾಡದೆ ಇರುವುದು ಹಾಗೂ

ಯಾವುದೇ ಕಾನೂನು ಕ್ರಮ ಕೈಗೊಳ್ಳದೆ ಇರುವುದು ಕಂಡು ಬಂದಿರುತ್ತದೆ ಎಂಬ ಅಭಿಪ್ರಾಯದೊಂದಿಗೆ ಅವರು ವರದಿ ಸಲ್ಲಿಸಿದ್ದಾರೆ.

ಸದರಿ ವರದಿಯ ಪ್ರತಿಯನ್ನು ದೂರುದಾರರ ಅಭಿಪ್ರಾಯಕ್ಕಾಗಿ ಕಳುಹಿಸಿದ್ದು, ನೋಟಿಸು ಜಾರಿ ಆಗಿ ಸ್ವೀಕೃತಿ ಬಂದಿದ್ದು, ಆದರೆ ದೂರುದಾರರು ಅಭಿಪ್ರಾಯ ಸಲ್ಲಿಸಿರುವುದಿಲ್ಲ.

ದೂರು ಮತ್ತು ವರದಿಯನ್ನು ಪರಿಶೀಲಿಸಲಾಗಿ ಶ್ರೀ ಮೊಹಮದ್ ಹಫೀಜ್ ಅವರನ್ನು ದಿನಾಂಕ: 13.08.2018 ರಂದು ಸಂಜೆ ಇಲವಾಲ ಪೊಲೀಸ್ ಠಾಣಾ ಮೊ.ಸಂ.153/2018ರಲ್ಲಿ ಕಲಂ 392 ಐಪಿಸಿ ಅಡಿ ದಸ್ತಗಿರಿ ಮಾಡಿದ್ದರೂ ಸಹ ಎಮ್.ಎಲ್.ಸಿ ಮೆಮೊ ಬಗ್ಗೆ ಈತನನ್ನು ವಿಚಾರಣೆ ಮಾಡದೇ ಇರುವುದು ಹಾಗೂ ಯಾವುದೇ ಕಾನೂನು ಕ್ರಮ ಕೈಗೊಳ್ಳದೇ ಇರುವುದಾಗಿ ಆಯೋಗದ ಡಿವೈಎಸ್‌ಪಿ ಅವರು ವರದಿ ಮಾಡಿರುವುದರಿಂದ ಶ್ರೀ ಮೊಹಮದ್ ಹಫೀಜ್ ಅವರು ದಿನಾಂಕ: 31.07.2018 ರಂದು ಸಂಜೆ 4.30 ಗಂಟೆಯಲ್ಲಿ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದ ಬಗ್ಗೆ ಆಸ್ಪತ್ರೆಯವರು ಕಳುಹಿಸಿದ್ದ ಇಂಟಿಮೇಷನ್ (MLC) ಅನ್ನು ದಿನಾಂಕ: 31.07.2018 ರಂದು ಠಾಣಾ ಎಸ್.ಹೆಚ್.ಓ ಕರ್ತವ್ಯದಲ್ಲಿದ್ದ ಶ್ರೀ ಟಿ.ಗೋವಿಂದ ಹೆಚ್‌ಸಿ ಅವರು ಹಾಗೂ ಠಾಣೆಯ ಮುಖ್ಯಸ್ಥರಾದ ಶ್ರೀ ಕರೀಮ್ ರಾವ್‌ತರ್ ವಿಚಾರಣೆ ಮಾಡದೇ ಹಾಗೂ ಯಾವುದೇ ಕಾನೂನು ಕ್ರಮ ಕೈಗೊಳ್ಳದೇ ಇರುವುದರಿಂದ ಶ್ರೀ ಕರೀಮ್ ರಾವ್‌ತರ್ ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಚಾರ ನಿಗ್ರಹದಳ, ಮೈಸೂರು ಗ್ರಾಮಾಂತರ ಪೊಲೀಸ್ ವೃತ್ತ, ಮೈಸೂರು ಜಿಲ್ಲೆ ಮತ್ತು ಶ್ರೀ ಟಿ. ಗೋವಿಂದ ಹೆಚ್‌ಸಿ-70 ಹಾಲಿ ಮೈಸೂರು ದಕ್ಷಿಣ ಪೊಲೀಸ್ ಠಾಣೆ, ಮೈಸೂರು ಅವರಿಗೆ PHR Act 1993 ಕಲಂ 16ರ ಅಡಿ ಕಾರಣ ಕೇಳುವ ನೋಟೀಸು ನೀಡಿ, ಆಯೋಗದ ಮುಂದೆ ಖುದ್ದು ಹಾಜರಾಗಿ ಲಿಖಿತ ಸಮಜಾಯಿಷಿ ಸಲ್ಲಿಸುವಂತೆ ಆದೇಶಿಸಲಾಗಿದ್ದು ಹಾಗೂ ದೂರುದಾರರಾದ ಶ್ರೀಮತಿ ಸೈಯದ್ ಜಬೀನ್ ತಾಜ್ ಅವರನ್ನು ಸಹ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದ್ದು, ದಿನಾಂಕ: 23.10.2020 ರಂದು ಮೇಲ್ಕಂಡ ಪೊಲೀಸ್ ಅಧಿಕಾರಿಗಳು ಹಾಗೂ ದೂರುದಾರರ ಪತಿಯಾದ ಶ್ರೀ ಮೊಹಮದ್ ಹಫೀಜ್ ರವರೊಂದಿಗೆ ದೂರುದಾರರು ಸಹ ಹಾಜರಾಗಿರುತ್ತಾರೆ. ದೂರುದಾರರು ಹಾಗೂ ಅವರ ಪತಿಯು ಆಯೋಗದ ಮುಂದೆ ಅವರ ಹೇಳಿಕೆಗಳನ್ನು ನೀಡಿರುತ್ತಾರೆ. ಶ್ರೀ ಕರೀಮ್ ರಾವ್‌ತರ್ ರವರು ಅವರ ಲಿಖಿತ ಸಮಜಾಯಿಷಿ ನೀಡಿರುತ್ತಾರೆ.

ದಿನಾಂಕ: 23.10.2020ರಂದು ಶ್ರೀ ಆರ್.ಮೊಹಮದ್ ಹಫೀಜ್ ರವರು ಆಯೋಗದ ಮುಂದೆ ಕೆಳಕಂಡಂತೆ ಹೇಳಿಕೆಯನ್ನು ನೀಡಿರುತ್ತಾರೆ:–

"ದಿನಾಂಕ. 28.07.2018 ರಂದು ಬೆಳಿಗ್ಗೆ 11.00 ಗಂಟೆಯಲ್ಲಿ ಜ್ಯುವೆಲರ್ಸ್‌ನ ಅಂಗಡಿಯಲ್ಲಿ ನಾನು ವ್ಯಾಪಾರ ಮಾಡಿಕೊಂಡಿರುವ ಸಮಯದಲ್ಲಿ ಸಾದಾ ಉಡುಪಿನಲ್ಲಿ ಮೈಸೂರು ಸೌತ್ ಪೊಲೀಸ್ ಠಾಣೆಯ ಪೊಲೀಸರಾದ ಶ್ರೀ ಜಹೂರ್ ಮತ್ತು ಸತೀಶ್ ರವರು ನನ್ನ ಬಳಿ ಬಂದು ಸಾಹೇಬರು ಕರೆಯುತ್ತಿದ್ದಾರೆ ಬಾ ಎಂದು ನನ್ನನ್ನು ಮೈಸೂರು ಗೆಸ್ಟ್‌ಹೌಸ್ ಹಿಂದೆ ಕರೆದುಕೊಂಡು ಹೋದರು. ಅಲ್ಲಿ ಮೈಸೂರು ಸೌತ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶ್ರೀ ಕರೀಂ ರಾವ್‌ತರ್ ಮತ್ತು ಇನ್ನು 3, 4 ಜನ ಪೊಲೀಸ್ ಸಿಬ್ಬಂದಿಗಳು ಇದ್ದರು. ಅಲ್ಲಿಂದ ಮೈಸೂರಿನ ಬಂಡೀಪಾಳ್ಯದ ಒಂದು ರೂಂಗೆ ಕರೆದುಕೊಂಡು ಹೋಗಿ ಅಲ್ಲಿದ್ದ ಒಬ್ಬ ಕಳ್ಳನನ್ನು ತೋರಿಸಿ, ಈತನಿಂದ ನೀನು ಕಳ್ಳತನದ ಚಿನ್ನವನ್ನು ಪಡೆದಿರುತ್ತೀಯಾ ಎಂದು ಕೇಳಿದರು. ಆಗ ನಾನು ಈತನನ್ನು ನಾನು ನೋಡಿರುವುದಿಲ್ಲ ಇದೇ ಮೊದಲ ಬಾರಿ ನೋಡುತ್ತಿರುವುದು ಅಂದೆನು. ಅದಕ್ಕೆ ಅವರು ನೀನು ಎಷ್ಟು ಚಿನ್ನ ಕೊಡುತ್ತೀಯಾ ಎಂದು ಕೇಳಿದರು ಅದಕ್ಕೆ ನಾನು ನನ್ನ ಬಳಿ ಚಿನ್ನ ಇಲ್ಲ 20, 30 ಸಾವಿರ ಹಣ ಕೊಡುತ್ತೇನೆ ಎಂದು ಹೇಳಿದೆ. ಅದಕ್ಕೆ ಅವರು ಒಪ್ಪದೆ ಬೆಂಚ್ ಮೇಲೆ ನನ್ನನ್ನು ಮಲಗಿಸಿ, ಕೈ ಕಾಲುಗಳನ್ನು ಹಗ್ಗದಿಂದ ಕಟ್ಟಿ, ಪೊಲೀಸರು ಮತ್ತು ಇನ್ಸ್‌ಪೆಕ್ಟರ್ ಶ್ರೀ ಕರೀಂ ರಾವ್‌ತರ್ ರವರು ನನ್ನ ಬೆನ್ನು, ಕಾಲು ಮತ್ತು ಹೊಟ್ಟೆಯ ಮೇಲೆ ತುಳಿದರು. ಅದಕ್ಕೆ ಹೆದರಿ ನಾನು 100 ಗ್ರಾಂ ಚಿನ್ನ ಕೊಡುತ್ತೇನೆ ಎಂದು ಒಪ್ಪಿಕೊಂಡ ನಂತರ ನನ್ನನ್ನು ಮೈಸೂರು ಸೌತ್ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಲಾಕಪ್‌ನಲ್ಲಿ ಹಾಕಿರುತ್ತಾರೆ.

ಮರುದಿನ 29.07.2018ರಂದು ರಾತ್ರಿ 9 ಗಂಟೆಗೆ ನನ್ನ ಅಣ್ಣ ಶ್ರೀ ಮಹಮದ್ ಪರ್ವೀಜ್ ಮತ್ತು ನನ್ನ ಸಂಬಂಧಿ ಶ್ರೀ ಹಫಿಜುಲ್ಲಾ ಷರೀಫ್ ರವರನ್ನು ಬಂಡಿಪಾಳ್ಯದ ರೂಮಿಗೆ ಕರೆಯಿಸಿ, 450 ಗ್ರಾಂ ಚಿನ್ನವನ್ನು ರೆಡಿ ಮಾಡಿ ತರುವಂತೆ ಹೇಳಿ ಅವರ ಜೊತೆ ಮನೆಗೆ ಕಳುಹಿಸಿ ಕೊಟ್ಟಿರುತ್ತಾರೆ.

ದಿನಾಂಕ. 30.07.2018 ರಂದು ನಾನು ನನ್ನ ಸ್ನೇಹಿತ ವಕೀಲ ಅಲೀಂ ರವರನ್ನು ಹೋಗಿ ಭೇಟಿ ಮಾಡಿ ಪೊಲೀಸರು ನನಗೆ ತೊಂದರೆ ಕೊಡುತ್ತಿರುವುದರ ಬಗ್ಗೆ ಹೇಳಿದ್ದು, ಅದಕ್ಕೆ ಅವರು ಮಾನವ ಹಕ್ಕುಗಳ ಆಯೋಗ ಮತ್ತು ಮೇಲಾಧಿಕಾರಿಗಳಿಗೆ ದೂರು ನೀಡಲು ಸಲಹೆ ಕೊಟ್ಟಿರುತ್ತಾರೆ.

ನಂತರ ದಿನಾಂಕ. 31.07.2018 ರಂದು ಸಂಜೆ ಸುಮಾರು 4–00 ಗಂಟೆಗೆ ಕೆ.ಆರ್ ಆಸ್ಪತ್ರೆಯಲ್ಲಿ ನನಗೆ ಪೊಲೀಸರು ಹೊಡೆದಿದ್ದರ ಬಗ್ಗೆ ವೈದ್ಯರ ಬಳಿ ಚಿಕಿತ್ಸೆ ಪಡೆದಿರುತ್ತೇನೆ. ನಂತರ ಲಾಯರ್ ರವರು ನಾನು ಜೈಪುರ ಹೋಗುತ್ತಿದ್ದೇನೆ. ನಾನು ಬಂದ ನಂತರ ಪೆಟಿಷನ್ ತಯಾರು ಮಾಡುತ್ತೇನೆ. ಅಲ್ಲಿಯವರೆಗೆ ನೀನು ಪೊಲೀಸರ ಕೈಗೆ ಸಿಗಬೇಡ, ಎಲ್ಲಿಯಾದರೂ ಇರು ಎಂದು ಹೇಳಿದರು. ನಂತರ ನಾನು ಬೆಂಗಳೂರಿನ ಆರ್.ಟಿ ನಗರದಲ್ಲಿರುವ ನಮ್ಮ ಸಂಬಂಧಿಕರ ಮನೆಗೆ ಬಂದಿರುತ್ತೇನೆ.

ದಿನಾಂಕ.04.08.2018 ರಂದು ಲಾಯರ್ ಅಲೀಂ ರವರು ಪೆಟಿಷನ್ ತಯಾರು ಮಾಡಿ ಕೊಟ್ಟರು, ಅದನ್ನು ನಾನು ಕರ್ನಾಟಕ ಮಾನವ ಹಕ್ಕುಗಳ ಆಯೋಗ, ಐಪಿಜಿ,

ಮತ್ತು ಪೊಲೀಸ್ ಕಮೀಷನರ್ ಮೈಸೂರು ರವರಿಗೆ ಅಂಚೆ ಮೂಲಕ ರವಾನಿಸಿದೆ. ನಂತರ ನನ್ನ ಪತ್ನಿ ನನಗೆ ಫೋನ್ ಮಾಡಿ ನಿಮ್ಮ ತಂದೆ ರೆಹಮಾನ್ ಷರೀಫ್ ರವರನ್ನು ಮೈಸೂರು ಸೌತ್ ಪೊಲೀಸರು ಠಾಣೆಗೆ ಕರೆದುಕೊಂಡು ಹೋಗಿರುವುದಾಗಿ ನನಗೆ ತಿಳಿಸಿದರು. ನಂತರ ನಾನು ಲಾಯರ್‌ಗೆ ಫೋನ್ ಮಾಡಿ ಈ ವಿಷಯ ತಿಳಿಸಿದಾಗ ಅವರು ನಿಮ್ಮ ತಂದೆಯವರನ್ನು ಪೊಲೀಸರು ಏನು ಮಾಡುವುದಿಲ್ಲ ಸಂಜೆ ಆದ ನಂತರ ಮನೆಗೆ ಕಳುಹಿಸುತ್ತಾರೆಂದು ಹೇಳಿದರು. ನಂತರ ರಾತ್ರಿ ಸುಮಾರು 10.30 ಗಂಟೆಗೆ ಪೊಲೀಸರು ನಮ್ಮ ತಂದೆಯವರನ್ನು ಬಿಟ್ಟಿರುತ್ತಾರೆ.

ನಂತರ ದಿನಾಂಕ. 09.08.2018 ರಂದು ಪೊಲೀಸರು ನಮ್ಮ ಅಣ್ಣನೊಂದಿಗೆ ಆರ್.ಟಿ ನಗರದ ಮನೆಯಲ್ಲಿದ್ದ ನಮ್ಮ ಮಾವ ಮತ್ತು ನನ್ನ ನಾದಿನಿ ಗಂಡನನ್ನು, ನಿಮ್ಮ ಅಳಿಯ ಎಲ್ಲಿದ್ದಾನೆ ಎಂದು ಹೇಳಿ, ಹೇಳದಿದ್ದರೆ ನಾನು ನಿಮ್ಮ ಮೇಲೆ ಕೇಸ್ ಹಾಕಿ ಜೈಲಿಗೆ ಕಳುಹಿಸುತ್ತೇನೆ ಎಂದು ಬೆದರಿಕೆ ಹಾಕಿ, ನಮ್ಮ ಮಾವ ಮತ್ತು ನಾದಿನಿ ಗಂಡನನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ನನ್ನ ಪತ್ನಿ ನನಗೆ ಫೋನ್ ಮಾಡಿ ನೀವು ಬೇಗ ಬನ್ನಿ ಸುಹೇಲ್ ರವರ ಮೇಲೆ ಕೇಸ್ ಫಿಟ್ ಮಾಡಿ ಜೈಲಿಗೆ ಕಳುಹಿಸುತ್ತೇನೆಂದು ಬೆದರಿಕೆ ಹಾಕುತ್ತಿದ್ದಾರೆ ಮತ್ತು ಅವರ ಕೆಲಸದ ಎಲ್ಲಾ ಡಿಟೇಲ್ಸ್ ಅನ್ನು ತೆಗೆದುಕೊಳ್ಳುತ್ತಿದ್ದಾರೆ, ಅವರ ಕೆಲಸ ಕಳೆದುಕೊಳ್ಳುತ್ತಿದ್ದಾರೆ ಎಂದು ಹೇಳಿದಾಗ ನಾನು ದಿನಾಂಕ. 10.08.2018 ಸಂಜೆ 5.00 ಗಂಟೆಗೆ ಮೈಸೂರು ಸೌತ್ ಪೊಲೀಸ್ ಠಾಣೆಗೆ ಹೋಗಿ ಇನ್ಸ್‌ಪೆಕ್ಟರ್ ರವರ ಮುಂದೆ ಶರಣಾದೆ. ಅದೇ ದಿನ ಸಂಜೆ 8.00 ಗಂಟೆಗೆ ಜಹೂರ್ ಮತ್ತು ಇನ್ನಿತರ ಪೊಲೀಸರೊಂದಿಗೆ ಉದಯ್‌ಗಿರಿಯಲ್ಲಿರುವ ನನ್ನ ಮನೆಗೆ ಹೋಗಿ ನನ್ನ ಹೆಂಡತಿ ಹತ್ತಿರ ನಮ್ಮ ಚಿನ್ನದ ಅಂಗಡಿಯ ಕೀ ಕೊಡು ಎಂದು ಕೇಳಲಾಗಿ, ನನ್ನ ಹೆಂಡತಿಯು ಅಂಗಡಿಯ ಕೀ ಕೊಟ್ಟಿದ್ದು, ನಾನೇ ಸ್ವತ: ಅಂಗಡಿಯ ಬಾಗಿಲನ್ನು ತೆಗೆದು 100 ಗ್ರಾಂ ಚಿನ್ನವನ್ನು ಪೊಲೀಸರ ಕೈಯಲ್ಲಿ ಕೊಟ್ಟಿರುತ್ತೇನೆ. 100 ಗ್ರಾಮ ಚಿನ್ನವನ್ನು ಕೊಟ್ಟ ನಂತರ ನನ್ನ ಮಾವ ಮತ್ತು ನನ್ನ ಹೆಂಡತಿಯ ತಂಗಿಯ ಗಂಡನನ್ನು ಠಾಣೆಯಿಂದ ಬಿಟ್ಟಿರುತ್ತಾರೆ.

ದಿನಾಂಕ.11.08.2018ರಂದು ಮದ್ಯಾಹ್ನ ನಾನು ನನ್ನ ಹೆಂಡತಿಗೆ ಫೋನ್ ಮಾಡಿ ಪೊಲೀಸರಿಗೆ 250 ಗ್ರಾಂ ಚಿನ್ನ ಕೊಡಬೇಕಂತೆ, ಇಲ್ಲದಿದ್ದರೆ ನನ್ನನ್ನು ಬಿಡುವುದಿಲ್ಲವೆಂದು ಹೇಳಿ, ನನ್ನ ಹೆಂಡತಿಗೆ ಅಶೋಕ್ ರೋಡ್‌ನಲ್ಲಿರುವ ಸೇಠು ಅಂಗಡಿಗೆ ಹೋಗಿ ಅವರಿಗೆ ಹಣ ಕೊಡು, ಅವರು ಚಿನ್ನದ ಗಟ್ಟಿಯನ್ನು ಮಾಡಿಕೊಡುತ್ತಾರೆ, ಆಗ ಅದನ್ನು ನೀನು ಪೊಲೀಸರಿಗೆ ಕೊಡು ಎಂದು ಹೇಳಿದೆ. ಅದರಂತೆ ನನ್ನ ಹೆಂಡತಿಯು ಪೊಲೀಸರಿಗೆ 250 ಚಿನ್ನದ ಗಟ್ಟಿಯನ್ನು ಕೊಟ್ಟಿರುತ್ತಾರೆ. ಆದಾದ ನಂತರ, ಮತ್ತೆ ನನಗೆ 1 ಲಕ್ಷ ರೂ ಹಣ ಕೊಡು ಎಂದು ಹೇಳಿದ್ದು, ಠಾಣೆಯ ಬಳಿ ಬಂದಿದ್ದ ನನ್ನ ಅಣ್ಣನಿಗೆ 30 ಸಾವಿರಗಳನ್ನು ಜಹೂರ್ ರವರಿಗೆ ಕೊಡಿ ಎಂದು ಹೇಳಿದೆನು. ಅದರಂತೆ ನನ್ನ ಅಣ್ಣ ಹಣ ನೀಡಿರುತ್ತಾರೆ.

ದಿನಾಂಕ.13.08.2018ರಂದು ಇನ್ಸ್‌ಪೆಕ್ಟರ್ ರವರು ನಿನಗೆ ಹೊಡೆದರೆ ನೋವಾಗಲ್ಲ, ಈಗ ಪೆನ್ನಿನಿಂದ ಬರೆದು ನಿನಗೆ ಶಿಕ್ಷೆ ಕೊಡಿಸುತ್ತೇನೆ ನೋಡು ಎಂದು ಅವಾಚ್ಯ ಶಬ್ದಗಳಿಂದ ನನ್ನನ್ನು ಬೈದು, ಬೆದರಿಕೆ ಹಾಕಿ, ಹಲ್ಲೆ ಮಾಡಿದರು. ನಂತರ ಅದೇ ದಿನ ಸಂಜೆ ಮ್ಯಾಜಿಸ್ಟ್ರೇಟ್ ರವರ ಮುಂದೆ ನನ್ನನ್ನು ಹಾಜರುಪಡಿಸಿರುತ್ತಾರೆ.

ನನ್ನನ್ನು ಅಕ್ರಮ ಬಂಧನದಲ್ಲಿ ಇರಿಸಿ, ಚಿನ್ನದ ಒಡವೆಗಳನ್ನು ನೀಡುವಂತೆ ದೈಹಿಕ ಮತ್ತು ಮಾನಸಿಕ ತೊಂದರೆ ನೀಡಿದ ಮೈಸೂರು ಸೌತ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶ್ರೀ ಕರೀಂ ರಾವ್‌ತರ್ ಮತ್ತು ಪೊಲೀಸ್ ಸಿಬ್ಬಂದಿಯವರಾದ ಶ್ರೀ ಸತೀಶ್, ಶ್ರೀ ಜಹೂರ್ ಮತ್ತು ಇತರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ನನ್ನ ಹೇಳಿಕೆಯೊಂದಿಗೆ ಮೈಸೂರು ಸೌತ್ ಪೊಲೀಸರು ನನ್ನ ಕಾಲಿಗೆ ಹೊಡೆದಿದ್ದು, ಆ ಬಗ್ಗೆ 4 ಫೋಟೋಗಳು ಮತ್ತು ನಾನು ಕೆ.ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಆಸ್ಪತ್ರೆಯ ದಾಖಲೆಗಳನ್ನು ಹಾಜರುಪಡಿಸಿ ಆಯೋಗದ ಕಛೇರಿಯಲ್ಲಿ ನನ್ನನ್ನು ವಿಚಾರ ಮಾಡಿ ಕೇಳಿದ ಆಯೋಗದ ವಿಚಾರಣಾಧಿಕಾರಿಯವರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ."

ದಿನಾಂಕ: 23.10.2020ರಂದು ಶ್ರೀಮತಿ ಸೈಯದಾ ಜಬೀನ್ ತಾಜ್ ರವರು ಆಯೋಗದ ಮುಂದೆ ಕೆಳಕಂಡಂತೆ ಹೇಳಿಕೆಯನ್ನು ನೀಡಿರುತ್ತಾರೆ:-

"………ದಿನಾಂಕ.28.07.2018ರಂದು ಬೆಳಿಗ್ಗೆ 11.00 ಗಂಟೆಗೆ ನನ್ನ ಗಂಡ ಹಫೀಜ್ ರವರು ನನಗೆ ಫೋನ್ ಮಾಡಿ ನಮ್ಮ ಅಂಗಡಿ ಹತ್ತಿರ ಇಬ್ಬರು ಪೊಲೀಸರು ಬಂದು ನನ್ನ ಹತ್ತಿರ ಮಾತಾಡಿ ಬಂಡಿಪಾಳ್ಯದ ಒಂದು ರೂಮ್‌ಗೆ ಕರೆದುಕೊಂಡು ಹೋಗಿದ್ದಾರೆ ಎಂದು ವಿಷಯ ತಿಳಿಸಿದರು. ನಂತರ ನಾನು ನನ್ನ ಗಂಡನ ಅಣ್ಣ ಮೊಹಮ್ಮದ್ ಪರ್ವೀಜ್ ಮತ್ತು ನನ್ನ ಗಂಡನ ಸ್ನೇಹಿತರಿಗೆ ಫೋನ್ ಮಾಡಿ ಎಲ್ಲಿ ಕರೆದುಕೊಂಡು ಹೋಗಿದ್ದಾರೆ ಎಂದು ಕೇಳಿದೆ. ನಂತರ ನನ್ನ ಗಂಡನ ಅಣ್ಣ ಮೊಹಮ್ಮದ್ ಪರ್ವೀಜ್, ಗಂಡನ ಸ್ನೇಹಿತರಾದ ಶ್ರೀ ತಬರೇಜ್ ಮತ್ತು ಬಷೀರ್ ರವರು ಮಾರನೇ ದಿನ ಬಂಡೀಪಾಳ್ಯದ ಆ ರೂಮ್‌ನಲ್ಲಿ ನೋಡಿದಾಗ, ಇಲ್ಲಿ ಇಬ್ಬರು ಪೊಲೀಸರು ಯಾರೋ ಬಂದಿದ್ದಾರೆ ನೋಡು ಬಾ ಎಂದು ನನ್ನ ಗಂಡ ಹಫೀಜ್ ರವರನ್ನು ಕರೆದುಕೊಂಡು ಬಂದಿರುತ್ತಾರೆ. ಆಗ ನನ್ನ ಗಂಡನ ಸ್ನೇಹಿತರು ನೋಡಿದಾಗ, ಅವರಿಗೆ ನಡೆಯಲು ಸಾಧ್ಯವಾಗದೇ ಕುಂಟುತ್ತಾ ಇದ್ದರೆಂದು ನನಗೆ ಫೋನ್ ಮಾಡಿ ತಿಳಿಸಿದರು. ನಂತರ ನನ್ನ ಗಂಡ ಹಫೀಜ್ ರವರು ಸಹ ಫೋನ್ ಮಾಡಿ ನನಗೆ 400 ಗ್ರಾಂ ಚಿನ್ನ ಕೊಡಬೇಕು ಅಂತ ಹೇಳುತ್ತಿದ್ದಾರೆ ಎಂದು ನನಗೆ ಹೇಳಿದ್ದಾರೆ. ಈ ಬಗ್ಗೆ ನಾನು ಫೋನ್ ಮಾಡುತ್ತೇನೆ ಎಂದು ಹೇಳಿ ಫೋನ್ ಇಟ್ಟರು. ನಂತರ ನನ್ನ ಗಂಡನ ಮಾವ ಶ್ರೀ ಹಫೀಜ್‌ಉಲ್ಲಾ ಷರೀಫ್ ರವರ ಜೊತೆ ನನ್ನ ಗಂಡನನ್ನು 29.07.2018 ರಂದು ರಾತ್ರಿ 9.00 ಗಂಟೆಗೆ ಮನೆಗೆ ಕಳುಹಿಸಿಕೊಟ್ಟರು. ಮನಗೆ ಬಂದ ತಕ್ಷಣವೇ ನಾನು ನನ್ನ ಗಂಡನ ಏಟಾಗಿದ್ದ ಕಾಲಿನ ಫೋಟೋವನ್ನು ಮೊಬೈಲ್‌ನಲ್ಲಿ ತೆಗೆದುಕೊಂಡೆ.

ನಂತರ ದಿನಾಂಕ. 30.07.2018ರಂದು ನನ್ನ ಗಂಡ ಹಾಗೂ ನನ್ನ ಗಂಡನ ಸ್ನೇಹಿತರು ಹೋಗಿ ಲಾಯರ್ ರವರನ್ನು ಭೇಟಿ ಮಾಡಿದಾಗ ಲಾಯರ್ ರವರು ಮೊದಲು ನೀವು ಆಸ್ಪತ್ರೆಗೆ ಹೋಗಿ ಎಂ.ಎಲ್.ಸಿ ಮಾಡಿಸಿ, ಪೆಟಿಷನ್ ಆಗುವವರೆಗೂ ಪೊಲೀಸರ ಕಣ್ಣಿಗೆ ಬೀಳದಂತೆ ಎಲ್ಲಿಯಾದರೂ ಇರು ಎಂದು ಹೇಳಿದರು. ಆಗ ನನ್ನ ಗಂಡ ಹಫೀಜ್ ರವರು ದಿನಾಂಕ.31.07.2020 ರಂದು ಮೈಸೂರಿನ ಕೆ.ಆರ್ ಆಸ್ಪತ್ರೆಗೆ ಹೋಗಿ ಎಂ.ಎಲ್.ಸಿ ಮಾಡಿಸಿ, ಅದೇ ರಾತ್ರಿ 8.00 ಗಂಟೆಗೆ ಹಫೀಜ್ ರವರು ಬೆಂಗಳೂರಿಗೆ ಹೋದರು.

ನಂತರ ದಿನಾಂಕ. 04.08.2018ರಂದು ಮೈಸೂರಿನ ಮಂಡಿಮೊಹಲ್ಲಾದಲ್ಲಿರುವ ನನ್ನ ಗಂಡನ ತಂದೆರವರ ಮನೆಗೆ 5,6 ಜನ ಮೈಸೂರು ಸೌತ್ ಪೊಲೀಸರು ಹೋಗಿ ನಿನ್ನ ಮಗ ಎಲ್ಲಿದ್ದಾನೆ ಎಂದು ಹೇಳಿ ಬೆದರಿಸಿ ಅವಾಚ್ಯ ಶಬ್ದಗಳಿಂದ ಬೈದು ನನ್ನ ಮಾವ ಹಾಗೂ ನನ್ನ ಗಂಡನ ಅಣ್ಣನ ಹೆಂಡತಿ ಶ್ರೀಮತಿ ಸಲ್ಮಾರವರನ್ನು ಮೈಸೂರು ಸೌತ್ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದಾರೆಂದು ನನಗೆ ನಮ್ಮ ಅತ್ತೆಯವರು ಫೋನ್ ಮಾಡಿ ಹೇಳಿದರು. ಹಾಗೂ ನಿಮ್ಮ ಮನೆ ಹತ್ತಿರನೂ ಸಹ ಬರುತ್ತಿದ್ದಾರೆ ಎಂದು ಹೇಳಿದರು. ಮತ್ತು ಅದೇ ದಿನ ರಾತ್ರಿ 10.30 ಗಂಟೆಗೆ ನಮ್ಮ ಮಾವನವನ್ನು ಪೊಲೀಸರು ಬಿಟ್ಟಿರುತ್ತಾರೆ.

ನಂತರ ದಿನಾಂಕ.05.08.2018 ರಂದು ಮೈಸೂರಿನ ಸೌತ್ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಕರೀಂ ರಾವ್‌ತರ್ ರವರು ಹಾಗೂ ಅವರ ಜೊತೆ 6 ರಿಂದ 7 ಜನ ಪೊಲೀಸ್ ಸಿಬ್ಬಂದಿಯವರು ಮೈಸೂರಿನ ಉದಯ್‌ಗಿರಿಯಲ್ಲಿರುವ ನಮ್ಮ ಮನೆಯ ಒಳಗೆ ಹೋಗಿ ಎಲ್ಲಾ ಕಡೆ ಹುಡುಕಾಡಿ, ಅಲ್ಲೆ ಕೆಳಗೆ ಇರುವ ನನ್ನ ತಂದೆ ಮನೆಯ ಒಳಗೆ ಹೋಗಿ ನಿಮ್ಮ ಅಳಿಯ ಎಲ್ಲಿದ್ದಾನೆ ಹೇಳಿ, ನೀವು ಹೇಳದಿದ್ದರೆ ಈಗ ಇರುವ ಕಳ್ಳತನ ಕೇಸ್ ಜೊತೆಗೆ ಇನ್ನು ಹೆಚ್ಚಾಗಿ ಕಳ್ಳತನ ಕೇಸು ಹಾಕುವುದಾಗಿ ಬೆದರಿಕೆ ಹಾಕಿರುತ್ತಾರೆ. ನಂತರ ನನ್ನ ಇನ್ನೊಬ್ಬ ತಂಗಿಯ ಮದುವೆ ಇದ್ದುದ್ದರಿಂದ ಬೆಂಗಳೂರಿನ ಆರ್.ಟಿ ನಗರದಲ್ಲಿರುವ ಮತ್ತೊಬ್ಬಳು ತಂಗಿ ಮತ್ತು ಆಕೆಯ ಗಂಡ ನನ್ನನ್ನು ಮತ್ತು ನನ್ನ ಮಕ್ಕಳನ್ನು ನನ್ನ ತಂದೆ–ತಾಯಿ, ತಂಗಿ ಮತ್ತು ತಮ್ಮನನ್ನು ಬೆಂಗಳೂರಿಗೆ ಕರೆದುಕೊಂಡು ಬಂದಿರುತ್ತಾರೆ.

ದಿನಾಂಕ.09.08.2018 ರಂದು ಶ್ರೀ ಜಹೂರ್ ಎಂಬ ಪೊಲೀಸ್ ಹಾಗೂ ಅವರ ಜೊತೆ ಇನ್ನು 4 ಜನ ಪೊಲೀಸ್ ಸಿಬ್ಬಂದಿಗಳು ಬೆಂಗಳೂರಿನ ಆರ್.ಟಿ ನಗರದಲ್ಲಿರುವ ನನ್ನ ತಂಗಿಯ ಮನೆಗೆ ಬಂದು ನನಗೆ ನಿನ್ನ ಗಂಡ ಎಲ್ಲಿ ಇದ್ದಾನೆ ಹೇಳು ಎಂದು ಅವಾಚ್ಯ ಶಬ್ದಗಳಿಂದ ಬೈದು ನಿನ್ನ ಮೇಲೆ, ನಿನ್ನ ತಂದೆ ಹಾಗೂ ನಿನ್ನ ತಂಗಿಯ ಗಂಡನ ಮೇಲೆ ಎಲ್ಲಾ ಕಳ್ಳತನದ ಕೇಸ್ ಹಾಕಿ ಜೈಲಿಗೆ ಕಳುಹಿಸುತ್ತೇವೆ ಎಂದು ಬೆದರಿಸಿ ನನ್ನ ತಂದೆ ಹಾಗೂ ನನ್ನ ತಂಗಿಯ ಗಂಡನನ್ನು ಪೊಲೀಸ್ ಜೀಪ್‌ನಲ್ಲಿ ಕರೆದುಕೊಂಡು ಹೋದರು.

ನಂತರ ನನ್ನ ತಂಗಿಯ ಗಂಡ ಶ್ರೀ ಸುಹೇಲ್ ರವರು ನನಗೆ ಫೋನ್ ಮಾಡಿ ನಿನ್ನ ಗಂಡನಿಗೆ ಫೋನ್ ಮಾಡಿ ಕರೆಸಿ, ಇಲ್ಲದಿದ್ದರೆ ನಮ್ಮಿಬ್ಬರನ್ನು ಮೈಸೂರು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗುತ್ತಿದ್ದಾರೆ. ನಮಗೆ ಪೊಲೀಸರು ಕಳ್ಳತನದ ಕೇಸ್‌ನಲ್ಲಿ ಫಿಟ್ ಮಾಡಿ ಜೈಲಿಗೆ ಕಳುಹಿಸುತ್ತಾರೆಂದು ಹೇಳುತ್ತಿದ್ದಾರೆ. ಹಾಗೂ ನನ್ನ ಆಫೀಸ್‌ಗೆ ಫೋನ್ ಮಾಡಿ ನನ್ನ ಡಿಟೇಲ್ಸ್ ತೆಗೆದುಕೊಳ್ಳುತ್ತಿದ್ದಾರೆ. ನಾನು ಕೆಲಸವನ್ನು ಕಳೆದುಕೊಳ್ಳುತ್ತೇನೆ. ಆದ್ದರಿಂದ ಹಫೀಜ್‌ಗೆ ಫೋನ್ ಮಾಡಿ ಬೇಗ ಕರೆಸಿ ಎಂದು ಹೇಳಿದರು. ನಂತರ ನಾನು ನನ್ನ ಗಂಡ ಹಫೀಜ್ ರವರಿಗೆ ಫೋನ್‌ಮಾಡಿ ಕರೆಸಿದೆ. ಅವರು ದಿನಾಂಕ.10.08.2018 ರಂದು ಸಂಜೆ 5 ಗಂಟೆಗೆ ಮೈಸೂರಿನ ಸೌತ್ ಪೊಲೀಸ್‌ಠಾಣೆಗೆ ಹೋಗಿ ಪೋಲಿಸರ ಮುಂದೆ ಶರಣಾಗಿರುತ್ತಾರೆ. ಅದೇ ದಿನ ಸಂಜೆ 7 ಗಂಟೆಗೆ ನನ್ನ ತಂದೆ ಹಾಗೂ ನನ್ನ ತಂಗಿಯ ಗಂಡ ಶ್ರೀ ಸುಹೇಲ್ ರವರನ್ನು ಠಾಣೆಯಿಂದ ಮನೆಗೆ ಕಳುಹಿಸಿಕೊಟ್ಟಿರುತ್ತಾರೆ. ನಂತರ ರಾತ್ರಿ 8.00 ಗಂಟೆಗೆ ನಮ್ಮ ಮನೆ

ಹತ್ತಿರ ಶ್ರೀ ಜಹೂರ್ ಎಂಬ ಪೊಲೀಸ್ ಹಾಗೂ ಇನ್ನಿತರ ಪೊಲೀಸರು ಬಂದು ಅಂಗಡಿಯ ಕೀ ಕೇಳಿದರು, ಆಗ ನಾನು ಅಂಗಡಿಗೆ ಹೋದೆ. ನನ್ನ ಗಂಡ ಹಫೀಜ್ ರವರು ಅಂಗಡಿಯ ಕೀ ತೆಗೆದುಕೊಂಡು, ಅಂಗಡಿಯ ಬಾಗಿಲನ್ನು ತೆಗೆದು ಅಂಗಡಿಯಲ್ಲಿದ್ದ 100 ಗ್ರಾಂ ಚಿನ್ನವನ್ನು ಪೊಲೀಸರಿಗೆ ಕೊಟ್ಟರು, ನಂತರ ಅದರ ಜೊತೆಗೆ ಪುನ: ನನ್ನ ಗಂಡನನ್ನು ಠಾಣೆಗೆ ಕರೆದುಕೊಂಡು ಹೋದರು.

ನಂತರ ದಿನಾಂಕ.11.08.2018 ರಂದು ಮಧ್ಯಾಹ್ನ ನನ್ನ ಗಂಡ ನನಗೆ ಫೋನ್ ಮಾಡಿ 250 ಗ್ರಾಂ ಚಿನ್ನ ಕೊಡಬೇಕಂತೆ ಇಲ್ಲದಿದ್ದರೆ ಬಿಡುವುದಿಲ್ಲವೆಂದು ಹೇಳುತ್ತಿದ್ದು, ಆದ್ದರಿಂದ ನೀನು ಅಶೋಕ್ ರೋಡ್‌ನಲ್ಲಿರುವ ಸೇಠು ಅಂಗಡಿಗೆ ಹೋಗು ಅಲ್ಲಿ ಅವರಿಗೆ ಹಣ ಕೊಡು ಎಂದು ಹೇಳಿದರು. ಆಗ ನಾನು ಕ್ರೆಡಿಟ್ ಕಾರ್ಡ್‌ನ್ನು ಸೇಠು ಅಂಗಡಿಗೆ ಹೋಗಿ ಕಾರ್ಡ್ swipe ಮಾಡಿ ಒಂದು ಲಕ್ಷ ರೂ ಹಣ ಕೊಟ್ಟೆ ನಂತರ ಸೇಠು ನನಗೆ 250 ಗ್ರಾಂ ಚಿನ್ನದ ಗಟ್ಟಿ ಮಾಡಿ ಕೊಟ್ಟರು. ನಂತರ ಅಲ್ಲೆ ಇದ್ದ ನನ್ನ ಗಂಡನ ಸಂಬಂಧಿ ಶ್ರೀ ಫೌಸ್ ಅವರ ಅಂಗಡಿಯಲ್ಲಿದ್ದ ಶ್ರೀ ಜಹೂರು ಹಾಗೂ ಇನ್ನಿತರ ಪೊಲೀಸ್ ಸಿಬ್ಬಂದಿಗಳ ಕೈಯಲ್ಲಿ 250 ಗ್ರಾಂ ಚಿನ್ನದ ಗಟ್ಟಿಯನ್ನು ಕೊಟ್ಟೆ. ನಂತರ ನಾಳೆ ನಿನ್ನ ಗಂಡನನ್ನು ಬಿಡುತ್ತೇವೆ, ಇವತ್ತು ಸಾಹೇಬರು ಇಲ್ಲವೆಂದು ಹೇಳಿ ಹೋದರು.

ನಂತರ ದಿನಾಂಕ.13.08.2018 ರಂದು ನನ್ನ ಗಂಡ ನನಗೆ ಫೋನ್ ಮಾಡಿ ನನ್ನ ಮೇಲೆ ಕಳ್ಳತನದ ಒಂದು ಕೇಸ್ ಹಾಕಿದ್ದಾರೆ. ಈಗ ಜಡ್ಜ್ ಮುಂದೆ ಹಾಜರು ಮಾಡಿ ಜೈಲಿಗೆ ಕರೆದುಕೊಂಡು ಹೋಗುತ್ತಿದ್ದಾರೆ. ನಂತರ ನನ್ನನ್ನು ಬಿಡುತ್ತಾರೆ. ನೀನು ಲಾಯರ್‌ಗೆ ಹೋಗಿ ಭೇಟಿ ಮಾಡು ಎಂದು ಹೇಳಿದರು. ನನ್ನ ಗಂಡನನ್ನು ಕಳ್ಳತನದ ಕೇಸ್ ಮೇಲೆ ಜೈಲಿಗೆ ಹಾಕಿದ್ದಾರೆಂದು ನ್ಯೂಸ್ ಪೇಪರ್‌ನಲ್ಲಿ ಕೂಡ ಬಂತು. ನಂತರ ನಾನು ಪೇಪರ್ ಅನ್ನು ಓದಿ ಮಾನವ ಹಕ್ಕುಗಳ ಆಯೋಗದಿಂದ ಶ್ರೀ ಆರ್.ಕೆ. ದತ್ತ ಸಾಹೇಬರು ಮೈಸೂರಿನ ಜಿಲ್ಲಾ ಪಂಚಾಯತ್‌ಗೆ ಬರುತ್ತಿದ್ದಾರೆಂದು ವಿಷಯ ತಿಳಿದು, ಸರ್ ರವರನ್ನು ಭೇಟಿ ಮಾಡಿ, ಈ ಬಗ್ಗೆ ದೂರನ್ನು ಕೊಟ್ಟೆ. ಆಗ ಸಾಹೇಬರು ನನ್ನ ದೂರನ್ನು ಕೇಳಿ ಪೊಲೀಸ್ ಅಧೀಕ್ಷಕರು, ಮೈಸೂರು ಅವರನ್ನು ಭೇಟಿ ಮಾಡಿ ಎಂದು ಹೇಳಿದರು. ಆಗ ನಾನು ಎಸ್.ಪಿ ರವರನ್ನು ಭೇಟಿ ಮಾಡಿದೆ ಅವರು ನಿನ್ನ ಗಂಡನ ಮೇಲೆ ಹಲವಾರು ಕಳ್ಳತನ ಕೇಸ್‌ಗಳು ಇವೆ, ಇದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಕಳುಹಿಸಿದರು. ನಂತರ ಬೆಂಗಳೂರಿನಲ್ಲಿರುವ ಮಾನವ ಹಕ್ಕುಗಳ ಆಯೋಗದ ವಿಚಾರಣಾಧಿಕಾರಿಯವರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ."

ದಿನಾಂಕ: ದಿನಾಂಕ.23.10.2020ರಂದು ಶ್ರೀ ಎ. ಕರೀಂ ರಾವ್‌ತರ್ ರವರು ಆಯೋಗಕ್ಕೆ ನೀಡಿರುವ ಲಿಖಿತ ಸಮಜಾಯಿಷಿಯಲ್ಲಿ, ದಿನಾಂಕ.10.06.2018ರಂದು ಮೈಸೂರು ಗ್ರಾಮಾಂತರ ವೃತ್ತ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಮೊ.ಸಂ.153/2018ರ ಪ್ರಕರಣದಲ್ಲಿ ಆರೋಪಿಯಾಗಿದ್ದ ಅಯೂಬ್ ಕೊಟ್ಟ ಸ್ವ-ಇಚ್ಛಾ ಹೇಳಿಕೆಯಲ್ಲಿ ತಾನು ಕಳ್ಳತನ ಮಾಡಿದಂತಹ 09 ಸರಗಳನ್ನು ಮೈಸೂರು ನಗರದ ಮೀನಾ ಬಜಾರ್‌ನಲ್ಲಿ ಚಿನ್ನದ ವ್ಯಾಪಾರ ಮಾಡಿಕೊಂಡಿರುವ ಷರೀಫ್ ಜ್ಯುವೆಲರ್ಸ್ ಅಂಗಡಿಯ

ಶ್ರೀ ಮೊಹಮ್ಮದ್ ಹಫೀಜ್‌ನಿಗೆ ಮಾರಾಟ ಮಾಡಿರುವುದಾಗಿ ತಿಳಿಸಿದ್ದು, ಈ ಸಂಬಂಧ ದಿನಾಂಕ.13.08.2020 ರಂದು ಸಂಜೆ 5.30 ಗಂಟೆಗೆ ಅಪರಾಧ ಪತ್ತೆ ದಳದ ಸಿಬ್ಬಂದಿಗಳಾದ ಶ್ರೀ ಮಂಜುನಾಥ್ ಮತ್ತು ಇತರೆ ಸಿಬ್ಬಂದಿಗಳು ಶ್ರೀ ಮೊಹಮ್ಮದ್ ಹಫೀಜ್ ನನ್ನು ವಶಕ್ಕೆ ತೆಗೆದುಕೊಂಡು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಮುಂದುವರೆದು ಶ್ರೀ ಮೊಹಮ್ಮದ್ ಹಫೀಜ್‌ನು ಸತತವಾಗಿ ಆರೋಪಿ ಮಹಮದ್ ಅಯೂಬ್‌ನಿಂದ ಚಿನ್ನದ ಸರಗಳನ್ನು ಖರೀದಿಸುತ್ತಿದ್ದು, ಅವುಗಳನ್ನು ಕಡಿಮೆ ಬೆಲೆಗೆ ಖರೀದಿ ಮಾಡುತ್ತಿರುವುದು ಹಾಗೂ ಈತನೊಂದಿಗೆ ಪರಿಚಯವಿಟ್ಟುಕೊಂಡಿರುವುದು ಆತನ ಹೇಳಿಕೆಯಿಂದ ಕಂಡು ಬಂದಿರುತ್ತದೆ. ಹಾಗೂ ಈ ವಿಚಾರವಾಗಿ ಶ್ರೀ ಮೊಹಮ್ಮದ್ ಹಫೀಜ್‌ನನ್ನು ಕಳುವು ಮಾಲು ಖರೀದಿ ಮಾಡುವ ಆರೋಪದ ಮೇಲೆ ಬಂಧಿಸಿ ಕಲಂ 411 ಐಪಿಸಿ ರೀತ್ಯ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಾಗಿರುತ್ತದೆ. ಮುಂದುವರೆದು ನಾನು ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆಯ ಠಾಣಾಧಿಕಾರಿಯಾಗಿರುವುದಿಲ್ಲ. ಪಿ.ಎಸ್.ಐ ರವರು ಠಾಣೆಯ ಉಸ್ತುವಾರಿ ಅಧಿಕಾರಿಯಾಗಿರುತ್ತಾರೆ. ಈ ರೀತಿ ಮಾನವ ಹಕ್ಕುಗಳ ಆಯೋಗದಲ್ಲಿ ವಿಚಾರಣೆಗಳು ಬಂದಿರುವ ಕಾರಣದ ಬಗ್ಗೆ ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕರ್ತವ್ಯದಲ್ಲಿದ್ದ ಹೆಚ್‌ಸಿ-70 ಶ್ರೀ ಗೋವಿಂದ್ ಇವರನ್ನು ವಿಚಾರಿಸಿದಾಗ ಶ್ರೀ ಮೊಹಮ್ಮದ್ ಹಫೀಜ್ ರವರು ಯಾವುದೇ ದೂರು ನೀಡದೇ ಇರುವುದರಿಂದ, ಫೋನ್ ಮಾಡಿ ಬರಲು ಹೇಳಿದರೂ ಅವರು ಬಾರದ ಕಾರಣ ವಿಚಾರದ ಅಸ್ಪಷ್ಟತೆ ಇರುವುದರಿಂದ ವಿಚಾರಣೆಯನ್ನು ಮಾಡಿರುವುದಿಲ್ಲವೆಂದು ತಿಳಿಸುತ್ತಿದ್ದಾರೆ. ನನಗೆ ಈ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿದ ಸಮಯ ಈ ರೀತಿಯ ಯಾವುದೇ ವಿಚಾರವನ್ನು ಆರೋಪಿಯು ತಿಳಿಸಿರುವುದಿಲ್ಲ. ಹಾಗೂ ಶ್ರೀ ಮೊಹಮ್ಮದ್ ಹಫೀಜ್‌ನು ತನ್ನ ಮೇಲೆ ಪೊಲೀಸರು ಕೇಸು ಮಾಡಿರುತ್ತಾರೆ ಮತ್ತು ಕಳವು ಮಾಲು ಸ್ವೀಕರಿಸುವ ಆರೋಪದಲ್ಲಿ ತನ್ನನ್ನು ಆರೋಪಿಯನ್ನಾಗಿ ಮಾಡಿರುತ್ತಾರೆಂಬ ದುರುದ್ದೇಶದಿಂದ ದೂರುಗಳನ್ನು ಬರೆಯುತ್ತಿದ್ದಾರೆ. ಅರ್ಜಿದಾರರು ಈ ಮದ್ಯೆ ನನಗೆ ಯಾವುದೇ ರೀತಿಯ ಸಂಪರ್ಕಕ್ಕೆ ಬಂದಿರುವುದಿಲ್ಲ. ಆರೋಪಿ ಶ್ರೀ ಮೊಹಮ್ಮದ್ ಹಫೀಜ್‌ನನ್ನು ನಾನು ಹುಡುಕಿರುವುದಾಗಲೀ, ಹಲ್ಲೆ ಮಾಡಿರುವುದಾಗಲೀ ಮಾಡಿರುವುದಿಲ್ಲ. ಆರೋಪಿಗಳನ್ನು ನಮ್ಮ ಸಿಬ್ಬಂದಿಗಳು ತಲಾಷು ಮಾಡಿ ವಶಕ್ಕೆ ತೆಗೆದುಕೊಂಡು ಬಂದು ಹಾಜರುಪಡಿಸಿರುತ್ತಾರೆ. ಶ್ರೀ ಮೊಹಮ್ಮದ್ ಹಫೀಜ್‌ನು ತಾನು ಎಸಗಿರುವ ಅಪರಾಧದಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಪೊಲೀಸರ ಮೇಲೆ ಈ ರೀತಿ ನಿರಾಧಾರವಾದ ಆರೋಪಗಳನ್ನು ಮಾಡಿರುತ್ತಾರೆ. ಹಾಗೂ ದೂರುದಾರರು ನನ್ನ ವಿರುದ್ಧ ಮಾಡಿರುವ ಆರೋಪಗಳು ಸುಳ್ಳಾಗಿರುತ್ತದೆ.

ತದನಂತರ ದಿನಾಂಕ.23.10.2020ರಂದು ಶ್ರೀ ಟಿ.ಗೋವಿಂದ ರವರ ಶ್ರೀ ಮೊಹಮದ್ ಹಫೀಜ್ ರವರ ಎಮ್ಎಲ್ಸಿ ಸ್ವೀಕರಿಸಿರುವ ಕುರಿತು ಮಾಹಿತಿ ನೀಡಿದ್ದು, ಶ್ರೀ ಮೊಹಮದ್ ರವರು ಪೊಲೀಸ್ ಠಾಣೆಗೆ ಬಂದು ಅವರ ಹೇಳಿಕೆಯನ್ನು ನೀಡಿರುವುದಿಲ್ಲ. ಆದಾಗ್ಯೂ ಶ್ರೀ ಗೋವಿಂದ ರವರು ಬೆಳಗ್ಗೆ 7.00 ಗಂಟೆಗೆ ಎಮ್.ಎಲ್.ಸಿಯ ಕುರಿತು ಪ್ರಭಾರ ಪಿಎಸ್ಐ ತಿಳಿಸಿರುವುದಾಗಿ ಹೇಳಿರುತ್ತಾರೆ. ಆದ್ದರಿಂದ ಪಿ.ಎಸ್ ಅಂದಿನ ಪಿಎಸ್ಐ ಆದ ಶ್ರೀ ಜಯಪ್ರಕಾಶ್ರವರಿಗೆ ಆಯೋಗದ ಮುಂದೆ ಖುದ್ದು ಹಾಜರಾಗುವಂತೆ ನೋಟೀಸ್ ಜಾರಿ ಮಾಡಿದ್ದು, ಅದರಂತೆ ದಿನಾಂಕ: 23.03.2021ರಂದು ಶ್ರೀ ಜಯಪ್ರಕಾಶ್, ಶ್ರೀ ಟಿ.ಗೋವಿಂದ ಹಾಗೂ ದೂರುದಾರರು ಅವರ ಪತಿಯೊಂದಿಗೆ ಆಯೋಗದ ಮುಂದೆ ಖುದ್ದು ಹಾಜರಾಗಿರುತ್ತಾರೆ. ಶ್ರೀ ಜಯಪ್ರಕಾಶ್ ಹಾಗೂ ಶ್ರೀ ಟಿ.ಗೋವಿಂದ ರವರುಗಳು ಅವರ ಹೇಳಿಕೆಗಳನ್ನು ಆಯೋಗದ ಮುಂದೆ ನೀಡಿರುತ್ತಾರೆ.

ದಿನಾಂಕ: 23.03.2021ರಂದು ಶ್ರೀ ಜಯಪ್ರಕಾಶ್ ಪಿ.ಎಸ್.ಐ ರವರು ಆಯೋಗದ ಮುಂದೆ ಕೆಳಕಂಡಂತೆ ಹೇಳಿಕೆಯನ್ನು ನೀಡಿರುತ್ತಾರೆ:-

> "ನಾನು ಮೈಸೂರು ಸೌತ್ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ 2016 ಆಗಸ್ಟ್ ನಿಂದ 2019 ಜುಲೈವರೆಗೆ ಕರ್ತವ್ಯ ನಿರ್ವಹಿಸುತ್ತೇನೆ. ಪ್ರತಿದಿನದಂತೆ ದಿನಾಂಕ: 1/8/2018 ರಂದು ದಿನನಿತ್ಯದ ಆಗುಹೋಗುಗಳ ಬಗ್ಗೆ ತಿಳಿಸುವಾಗ ಶ್ರೀ ಗೋವಿಂದ ಅವರು ನನಗೆ ಮೊಹಮ್ಮದ್ ಹಫೀಜ್ ರವರ ಎಮ್.ಎಲ್.ಸಿ ಸಂಬಂಧ ತಿಳಿಸಿದ್ದು ಸದರಿಯವರು ಹೊರರೋಗಿಯಾಗಿ ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ನಾನು ಎಚ್.ಸಿ ಗೋವಿಂದರವರಿಗೆ ಸಂಬಂಧಪಟ್ಟವರಿಗೆ ಸಂಪರ್ಕಿಸಿ ಸೂಕ್ತ ಕಾನೂನಿನ ಕ್ರಮ ತೆಗೆದುಕೊಳ್ಳಲು ತಿಳಿಸಿರುತ್ತೇನೆ.
>
> ನಂತರ ನಾನು ಠಾಣೆಯಲ್ಲಿ ಇದ್ದ ಸಂದಂರ್ಭದಲ್ಲಿ ಈ ಎಮ್.ಎಲ್.ಸಿಯ ಸಂಬಂಧಪಟ್ಟಂತೆ ಯಾರು ಸಹ ಠಾಣೆಗೆ ಬಂದಿರುವುದಿಲ್ಲ. ತದನಂತರ ಬಂದಿದ್ದರೆ ಕಾನೂನು ಕ್ರಮ ಕೈಗೊಳ್ಳುತ್ತಿದ್ದೆವು."

ದಿನಾಂಕ: 23.03.2021ರಂದು ಶ್ರೀ ಗೋವಿಂದ ಹೆಚ್.ಸಿ-70 ರವರು ಆಯೋಗದ ಮುಂದೆ ಕೆಳಕಂಡಂತೆ ಹೇಳಿಕೆಯನ್ನು ನೀಡಿರುತ್ತಾರೆ:-

> "ದಿನಾಂಕ: 31/7/2018 ರಂದು ರಾತ್ರಿ ಸುಮಾರು 11 ಗಂಟೆಯಲ್ಲಿ ನನಗೆ ಕೆ.ಆರ್ ಆಸ್ಪತ್ರೆ (ದೇವರಾಜ ಪೊಲೀಸ್ಹೊರ ಠಾಣೆ) ಹೊರ ಠಾಣೆಯಿಂದ ಮೊಹಮ್ಮದ್ ಹಫೀಜ್ ಅವರ ಬಾಬ್ತು ಎಮ್ಎಲ್ಸಿ ಮೆಮೋ ಇದೆ ಅಂತ ತಿಳಿಸಲಾಗಿದೆ ಹಾಗೂ ಸದರಿ ಮೊಹಮ್ಮದ್ ಮೆಮೋದಲ್ಲಿ ಮೊಬೈಲ್ ಸಂಖ್ಯೆಯನ್ನು ಸಹ ತಿಳಿಸಲಾಗಿ, ಸದರಿ ಮೊಬೈಲ್ ಸಂಖ್ಯೆಗೆ 9686617903 ಗೆ ನಾನು ಪೋನ್ ಮಾಡಿ ಮೊಹಮ್ಮದ್ ಹಫೀಜ್ ಅವರು ಇದ್ದಾರೆಯೇ ಎಂದು ಕೇಳಲಾಗಿ, ಆ ಕಡೆಯಿಂದ ಒಂದು ಹೆಂಗಸು ಮಾತನಾಡಿ ನಾನು ಮೊಹಮ್ಮದ್ ಹಫೀಜ್ ರವರ ಹೆಂಡತಿ ಎಂದು ಹೇಳಿದರು. ಆಗ ನಾನು ಮೊಹಮ್ಮದ್ ಹಫೀಜ್ ರವರು ಕೆ.ಆರ್. ಆಸ್ಪತ್ರೆಯಲ್ಲಿ ಇದ್ದಾರೆಯೇ ಎಂದು ಕೇಳಲಾಗಿ ಇಲ್ಲ ನಾನು ನಮ್ಮ ಯಜಮಾನರಿಗೆ

ಚಿಕಿತ್ಸೆ ಪಡೆದುಕೊಂಡು ವಾಪಸ್ಸು ಮನೆಗೆ ಬಂದಿರುತ್ತೇನೆ ಎಂದು ನನಗೆ ತಿಳಿಸಿದರು. ನಂತರ ನಾನು ನಿಮಗೇನು ತೊಂದರೆ ಆಗಿದೆ ಆ ಬಗ್ಗೆ ಬಂದು ಮೈಸೂರು ದಕ್ಷಿಣ ಪೊಲೀಸ್ ಠಾಣೆಗೆ ಬಂದು ದೂರನ್ನು ನೀಡಿ ಎಂದು ತಿಳಿಸಿದೆನು. ಆಗ ಆ ಹೆಂಗಸರು ಮಾರನೆಯ ದಿನ ಬೆಳಗ್ಗೆ ಬಂದು ದೂರನ್ನು ನೀಡುತ್ತೇವೆಂದು ನನಗೆ ತಿಳಿಸಿದರು ನಂತರ ನಾನು ಕೆ.ಆರ್ ಆಸ್ಪತ್ರೆಯಲ್ಲಿ ಮೆಮೋವನ್ನು ಪಡೆದುಕೊಂಡು ಬಂದು ಎಸ್.ಎಚ್.ಡಿಯಲ್ಲಿ ನಮೂದು ಮಾಡಿರುತ್ತೇನೆ. ಸದರಿ ಮೆಮೋದಲ್ಲಿ ಆಸ್ಪತ್ರೆಯವರು ಔಟ್ ಪೇಷೆಂಟ್ ಆಗಿ ಹೋಗಿದ್ದಾರೆ ಎಂದು ನಮಗೆ ಬರೆದು ಕಳುಹಿಸಿಕೊಟ್ಟಿರುತ್ತಾರೆ. ನಂತರ ನಾನು ಬೆಳಗ್ಗೆ 8 ಗಂಟೆಗೆ ಪಿ.ಎಸ್.ಐ ಜಯಪ್ರಕಾಶ್ ರವರಿಗೆ ಠಾಣೆಯಲ್ಲಿ ಮೌಖಿಕವಾಗಿ ತಿಳಿಸಿರುತ್ತೇನೆ. ನಂತರ ನಾನು ಸದರಿ ಮೊಹಮ್ಮದ್ ಹಫೀಜ್ ರವರು ಠಾಣೆಗೆ ಬರಬಹುದೆಂದು ಬೆಳಗ್ಗೆ 10 ಗಂಟೆಯವರೆಗೂ ಕಾಯ್ದು ಅವರು ಬಾರದಿದ್ದುದರಿಂದ ನಾನು ವಿಶ್ರಾಂತಿಗೆ ಹೋಗಿರುತ್ತೇನೆ.

ಶ್ರೀಮತಿ ಸೈಯಾದ್ ಜಬೀನ್ ತಾಜ್ ರವರಿಗೆ ಮೊಬೈಲ್ ಸಂಖ್ಯೆ 9686617903 ನಿಮ್ಮ ಮೊಬೈಲ್ ಸಂಖ್ಯೆಯೇ ಎಂದು ಕೇಳಲಾಗಿ ಹಾಗೂ ನೀವು 31-07-2018 ರಂದು ಸುಮಾರು 11 ಗಂಟೆಗೆ ಶ್ರೀ ಟಿ.ಗೋವಿಂದ್, ಎಚ್.ಸಿ.ರವರ ಕರೆಯನ್ನು ಸ್ವೀಕರಿಸಿದ್ದೀರಾ ಎಂದು ಕೇಳಲಾಗಿ, ಶ್ರೀಮತಿ ಸೈಯಾದ್ ಜಬೀನ್ ತಾಜ್ ರವರು ನಿರಾಕರಿಸಿದ್ದಾರೆ."

ದೂರರ್ಜಿಗಳು, ವರದಿಗಳು, ದೂರುದಾರರ ಹಾಗೂ ಎದುರುದಾರರ ಹೇಳಿಕೆಗಳು ಹಾಗೂ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲಾಗಿ, ದಿನಾಂಕ 28-07-2018 ರಂದು ಮೈಸೂರು ಸೌತ್ ಪೊಲೀಸ್ ಠಾಣೆಯ ಪೊಲೀಸ್ ಸಿಬ್ಬಂಧಿಗಳಾದ ಶ್ರೀ ಜಹೂರ್ ಹಾಗೂ ಶ್ರೀ ಸತೀಶ್ ರವರುಗಳು ದೂರುದಾರರ ಗಂಡನಾದ ಮೊಹಮದ್ ಹಫೀಜ್‌ರವರನ್ನು ಕರೆದುಕೊಂಡು ಸಿ.ಪಿ.ಐ ಆದ ಶ್ರೀ ಕರೀಂ ರಾವ್‌ತರ್ ರವರ ಮುಂದೆ ಹಾಜರುಪಡಿಸಿರುವುದಾಗಿ ಹಾಗೂ ಶ್ರೀ ಕರೀಂ ರಾವ್‌ತರ್, ಸಿ.ಪಿ.ಐ ರವರು ಶ್ರೀ ಮೊಹಮದ್ ಹಫೀಜ್ ರವರನ್ನು ಬಂಡಿಪಾಳ್ಯದ ಒಂದು ರೂಮಿನಲ್ಲಿ ಅಕ್ರಮ ಬಂಧನದಲ್ಲಿಟ್ಟು ದೈಹಿಕ ಹಲ್ಲೆ ಮಾಡಿರುತ್ತಾರೆಂದು ಶ್ರೀ ಮೊಹಮದ್ ಹಫೀಜ್‌ರವರ ಹೇಳಿಕೆಯಲ್ಲಿ ಹಾಗೂ ದೈಹಿಕ ಹಲ್ಲೆಯ ಬಗ್ಗೆ ಅವರು ನೀಡಿರುವ ಫೋಟೋ ಹಾಗೂ ಎಂ.ಎಲ್.ಸಿ ಯ ಪ್ರತಿಯಿಂದ ಕಂಡು ಬರುತ್ತದೆ. ತದನಂತರ, ದಿನಾಂಕ 29-07-2018ರಂದು ರಾತ್ರಿ 9 ಗಂಟೆಗೆ ಶ್ರೀ ಮೊಹಮದ್ ಹಫೀಜ್ ರವರನ್ನು ಬಂಡಿಪಾಳ್ಯದಲ್ಲಿರುವ ರೂಮಿನಿಂದ ಮೈಸೂರು ಸೌತ್ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಅಕ್ರಮ ಬಂಧನದಲ್ಲಿಟ್ಟು, ಅದೇ ರಾತ್ರಿ ಶ್ರೀ ಮೊಹಮದ್ ಹಫೀಜ್‌ರವರನ್ನು ಚಿನ್ನ ತರುವಂತೆ ಹೇಳಿ ಅವರನ್ನು ಬಿಡುಗಡೆ ಮಾಡಿರುತ್ತಾರೆ ಎಂದು ಶ್ರೀ ಮೊಹಮದ್ ಹಫೀಜ್‌ರವರ ಹೇಳಿಕೆಯಲ್ಲಿ ಕಂಡುಬರುತ್ತದೆ. ದಿನಾಂಕ 04-08-2018 ರಂದು ಶ್ರೀ ಕರೀಂ ರಾವ್‌ತರ್, ಸಿ.ಪಿ.ಐ ಮತ್ತು ಅವರ ತಂಡವು ಶ್ರೀ ಮೊಹಮದ್ ಹಫೀಜ್, ಅವರ ತಂದೆ ರೆಹಮಾನ್ ಷರೀಫ್, ಅವರ ಸಹೋರದನ ಪತ್ನಿ ಸಲ್ಮಾ ರವರನ್ನು ಮೈಸೂದು ಸೌತ್ ಪೊಲೀಸ್ ಠಾಣೆಗೆ ಕರೆತಂದು ಅಕ್ರಮ ಬಂಧನದಲ್ಲಿಟ್ಟಿರುವುದು ಶ್ರೀ ಸೈಯದಾ ಜಬೀನ್ ತಾಜ್ ಮತ್ತು ಶ್ರೀ ಮೊಹಮದ್ ಹಫೀಜ್ ರವರ ಹೇಳಿಕೆಯಲ್ಲಿ ಕಂಡುಬರುತ್ತದೆ.

ಮುಂದುವರೆದು, ದಿನಾಂಕ 09-08-2018 ರಂದು ದೂರುದಾರರ ತಂದೆ ಮತ್ತು ಮೈದುನನಾದ ಸುಹೇಲ್ ರವರನ್ನು ಅಕ್ರಮವಾಗಿ ಬೆಂಗಳೂರಿಂದ ಮೈಸೂರಿಗೆ ಕರೆತಂದಿರುತ್ತಾರೆಂದು ಶ್ರೀಮತಿ ಸೈಯದಾ ಜಬೀನ್ ತಾಜ್ ರವರ ಹೇಳಿಕೆಗಳಿಂದ ಕಂಡುಬರುತ್ತದೆ. ದಿನಾಂಕ 10-08-2018 ರಿಂದ 13-08-2018 ರವರೆಗೆ ಶ್ರೀ ಮೊಹಮದ್ ಹಫೀಜ್‌ರವರನ್ನು ಮತ್ತೆ ಅಕ್ರಮ ಬಂಧನದಲ್ಲಿಟ್ಟು, ತರುವಾಯ ಮ್ಯಾಜಿಸ್ಟ್ರೇಟ್ ರವರ ಮುಂದೆ ಹಾಜರುಪಡಿಸಿರುತ್ತಾರೆಂದು ಶ್ರೀ ಮೊಹಮದ್ ಹಫೀಜ್‌ರವರ ಹೇಳಿಕೆಗಳಿಂದ ಕಂಡುಬರುತ್ತದೆ.

ಶ್ರೀ ಗೋವಿಂದ.ಟಿ, ಹೆಚ್.ಸಿ-70 ರವರು, ಶ್ರೀ ಮೊಹಮದ್ ಹಫೀಜ್‌ರವರ ಮೇಲೆ ಪೊಲೀಸರು ಹಲ್ಲೆ ಮಾಡಿರುವ ಕುರಿತು ನೀಡಿರುವ ಎಂ.ಎಲ್.ಸಿ ಯ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ಇರುವುದು ಹಾಗೂ ಅಂದಿನ ಮೈಸೂರು ಸೌತ್ ಪೊಲೀಸ್ ಠಾಣೆಯ ಪಿ.ಎಸ್.ಐ ಆದ ಶ್ರೀ ಜಯಪ್ರಕಾಶ್ ರವರು ಸಹ ಎಂ.ಎಲ್.ಸಿ ಯ ಕುರಿತು ಯಾವುದೇ ಕ್ರಮ ಜರುಗಿಸಿರುವುದಿಲ್ಲವೆಂದು ವಿಚಾರಣಾ ಕಾಲದಲ್ಲಿ ಕಂಡುಬರುತ್ತದೆ. ಶ್ರೀ ಗೋವಿಂದ.ಟಿ ರವರು ಅವರ ಹೇಳಿಕೆಯಲ್ಲಿ ತಾನು ಮೊಬೈಲ್ ಸಂ.9686617903ಗೆ ಕರೆ ಮಾಡಿ ಎಂ.ಎಲ್.ಸಿ ಯ ಬಗ್ಗೆ ಸದರಿಯವರ ಪತಿಗೆ ಏನಾದರೂ ತೊಂದರೆಯಾಗಿದ್ದರೆ, ಪೊಲೀಸ್ ಠಾಣೆಗೆ ಬಂದು ದೂರನ್ನು ನೀಡಿ ಎಂದು ಹೇಳಿದ್ದು, ಅದಕ್ಕೆ ಪ್ರತ್ಯುತ್ತರವಾಗಿ ಶ್ರೀಮತಿ ಸೈಯದಾ ಜಬೀನ್ ತಾಜ್‌ರವರು ಮೇಲೆ ಹೇಳಲಾದ ಮೊಬೈಲ್ ಸಂಖ್ಯೆಯು ತನ್ನದಲ್ಲವೆಂದು ಹಾಗೂ ತನ್ನ ಪತಿಯವರ ಮೊಬೈಲ್ ಸಂಖ್ಯೆಯು ಸಹ ಅಲ್ಲವೆಂದು ಹೇಳಿರುತ್ತಾರೆ.

ಮುಂದುವರೆದು, ಶ್ರೀ ಮೊಹಮದ್ ಹಫೀಜ್ ರವರ ಮೊಬೈಲ್ ಸಂಖ್ಯೆ: 9686617003 ಆಗಿದ್ದು, ಆ ಸಂಖ್ಯೆಗೆ ಯಾವುದೇ ಕರೆಯು ಪೊಲೀಸರಿಂದ ಬಂದಿರುವುದಿಲ್ಲವೆಂದು ಶ್ರೀಮತಿ ಸೈಯದಾ ಜಬೀನ್ ತಾಜ್ ರವರು ಹೇಳಿರುತ್ತಾರೆ.

ಒಟ್ಟಾರೆಯಾಗಿ, ಶ್ರೀ ಕರೀಂ ರಾವ್‌ತರ್, ಸಿ.ಪಿ.ಐ ಹಾಗೂ ಅವರ ತಂಡ ದೂರುದಾರರ ಪತಿಯಾದ ಶ್ರೀ ಮೊಹಮದ್ ಹಫೀಜ್ ರವರನ್ನು ಅಕ್ರಮ ಬಂಧನದಲ್ಲಿಟ್ಟು ದೈಹಿಕ ಹಲ್ಲೆ ಮಾಡಿ ಹಾಗೂ ಅವರ ಹಾಗೂ ಅವರ ಪತ್ನಿಯ ಕುಟುಂಬ ಸದಸ್ಯರನ್ನು ಸಹ ಅಕ್ರಮ ಬಂಧನದಲ್ಲಿಟ್ಟಿರುವುದು ವಿಚಾರಣಾ ಕಾಲದಲ್ಲಿ ಹಾಗೂ ದೂರುದಾರರ ಮತ್ತು ಅವರ ಪತಿಯ ಹೇಳಿಕೆಯಿಂದ ಕಂಡುಬರುತ್ತದೆ.

ಶ್ರೀ ಜಯಪ್ರಕಾಶ್, ಪಿ.ಎಸ್.ಐ ಹಾಗೂ ಶ್ರೀ ಗೋವಿಂದ.ಟಿ ಹೆಚ್.ಸಿ–70 ರವರುಗಳು ಶ್ರೀ ಮೊಹಮದ್ ಹಫೀಜ್ ರವರ ಎಂ.ಎಲ್.ಸಿ ಯ ಬಗ್ಗೆ ಯಾವುದೇ ಕ್ರಮ ಜರುಗಿಸಿರುವುದಿಲ್ಲವೆಂದು ಹಾಗೂ ಕರ್ತವ್ಯ ನಿರ್ಲಕ್ಷ್ಯತನವನ್ನು ತೋರಿರುವುದು ವಿಚಾರಣಾ ಕಾಲದಲ್ಲಿ ಕಂಡುಬರುತ್ತದೆ. ಮೇಲ್ಕಂಡ ಕಾರಣಗಳಿಂದ, ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದೆ:

1. ದೂರರ್ಜಿದಾರರಾದ ಶ್ರೀಮತಿ ಸೈಯದಾ ಜಬೀನ್ ತಾಜ್‌ರವರ ಪತಿ ಶ್ರೀ ಮೊಹಮದ್ ಹಫೀಜ್ ರವರಿಗೆ ಹಾಗೂ ಶ್ರೀಮತಿ ಸೈಯದಾ ಜಬೀನ್ ತಾಜ್‌ರವರಿಗೆ ರೂ. 50,000/– (ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪರಿಹಾರ ರೂಪದಲ್ಲಿ ಒಂದು ತಿಂಗಳೊಳಗಾಗಿ ಸರ್ಕಾರದಿಂದ ನೀಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಲಾಗಿದೆ ಮತ್ತು ಈ ಪ್ರಕರಣದ ಘಟನೆಯ ಬಗ್ಗೆ ಶ್ರೀ ಕರೀಂ ರಾವ್‌ತರ್ ರವರ ಮೇಲೆ ಕೆಎಸ್‌ಪಿ (ಡಿಪಿ) ನಿಯಾಮವಳಿ 1965 ರ ಅನ್ವಯ ಇಲಾಖಾ ವಿಚಾರಣೆ ಮಾಡಿ, ಅಗತ್ಯ ಕ್ರಮ ವಿದಿಸುವಂತೆ ಶಿಫಾರಸ್ಸು ಮಾಡಲಾಗಿದೆ. ನಂತರ ವಿಚಾರಣೆಯ ತೀರ್ಪಿಗೊಳಪಟ್ಟ ಅಂದಿನ ಮೈಸೂರು ಗ್ರಾಮಾಂತರ ವೃತ್ತದ ಪೊಲೀಸ್ ನಿರೀಕ್ಷಕರಾದ ಶ್ರೀ ಕರೀಂ ರಾವ್‌ತರ್ ರವರ ವೇತನದಿಂದ ಪರಿಹಾರ ನೀಡಿದ ಹಣವನ್ನು ವಸೂಲಿ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸತಕ್ಕದ್ದು.

2. ಅಂದಿನ ಮೈಸೂರು ಸೌತ್ ಪೊಲೀಸ್ ಠಾಣೆಯ ಪಿ.ಎಸ್.ಐ ಆದ ಶ್ರೀ ಜಯಪ್ರಕಾಶ್ (ಹಾಲಿ ಪಿ.ಎಸ್.ಐ, ಬೀಚನಹಳ್ಳಿ ಪೊಲೀಸ್ ಠಾಣೆ, ಮೈಸೂರು), ಹಾಗೂ ಮೈಸೂರು ಸೌತ್ ಪೊಲೀಸ್ ಠಾಣೆಯ ಶ್ರೀ ಟಿ. ಗೋವಿಂದ, ಹೆಚ್.ಸಿ.70 ರವರುಗಳು ಕರ್ತವ್ಯ ನಿರ್ಲಕ್ಷ್ಯತನ ತೋರಿರುವುದು ಕಂಡುಬಂದಿರುವುದರಿಂದ ಕೆಎಸ್‌ಪಿ (ಡಿಪಿ) ನಿಯಾಮವಳಿ 1965 ರ ಅನ್ವಯ ಇಲಾಖಾ ವಿಚಾರಣೆ ನಡೆಸುವಂತೆ ಕರ್ನಾಟಕ ಸರ್ಕಾರದ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ರವರಿಗೆ ಶಿಫಾರಸ್ಸು ಮಾಡಲಾಗಿದೆ.

ಆದೇಶದ ಪ್ರತಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ *ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು* ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಸರ್ಕಾರದ ಅಪರ

ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ *ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು* ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು ಮತ್ತು ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಪ್ರಕ್ರಿಯೆ) ನಿಯಮಾವಳಿ 2020 ರಂತೆ ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ: 03–06–2021 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/-
(ಆರ್. ಕೆ. ದತ್ತ)
ಸದಸ್ಯರು

ಜಿ.ಎಸ್.